## 2017 ಕ.ತೀ.ವ. 1205

## ಸನ್ಮಾನ್ಯ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್

## ಎಂ. ಸೋಮಶೇಖರ್ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ, (ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ) ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಅರ್ಜಿದಾರರೆಲ್ಲರೂ ವ್ಯವಸಾಯ ಜಮೀನಿನ ಮಾಲೀಕರಾಗಿದ್ದು ಭೂಸ್ವಾಧೀನಗೊಳಿಸಲು ಎದುರುದಾರರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ ಕಲಂ 28(1) ರಡಿಯಲ್ಲಿ ನೀಡಿದ ಅಧಿಸೂಚನೆಯಲ್ಲಿ, ಭೂಸ್ವಾಧೀನಗೊಳಿಸಲು ನೀಡಿದ ಅಧಿಸೂಚನೆಯನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿಗಳು.

ಭೂಸ್ವಾಧೀನ ಪ್ರಕ್ರಿಯೆಯನ್ನು ಯಾವುದೇ ನಿಯಮಗಳಡಿಯಲ್ಲಿ ನಡೆಸಿ ಭೂ–ಸ್ವಾಧೀನ ಕಾಯಿದೆಯ ತಿದ್ದುಪಡಿಗೊಂಡ ಅಧಿನಿಯಮಗಳು ಅನ್ವಯವಾಗುತ್ತದೆ. ಹೀಗಾಗಿ ಭೂ–ಸ್ವಾಧೀನ ಕಾಯಿದೆ ಕಲಂ 24(2) ರಡಿಯಲ್ಲಿ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 2011 ಎಸ್‌ಸಿ 1113, ಎಂ. ನಾಗಭೂಷನ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು* | *(ಉಲ್ಲೇ) 8* |

* ರಿಟ್ ಅರ್ಜಿ ಸಂಖ್ಯೆ.: 51377/2014 ಮತ್ತು 52037–042/2014,
ದಿನಾಂಕ: 15ನೇ ಡಿಸೆಂಬರ್, 2016.

2. *(2011) 3 ಸ.ನ್ಯಾ.ಪ್ರ. 139*
ಆಫ್‌ಶೋರ್ ಹೊಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್
–ವಿರುದ್ಧ– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಮತ್ತು ಇತರರು (ಉಲ್ಲೇ) 8
3. *(2011) 3 ಎಸ್‌ಸಿಸಿ 1*
ಗಿರ್‌ನಾರ್ ಟ್ರೇಡರ್ಸ್ (3) –ವಿರುದ್ಧ–
ಮಹಾರಾಷ್ಟ್ರ ರಾಜ್ಯ ಮತ್ತು ಇತರರು (ಉಲ್ಲೇ) 8
4. *ಎಐಆರ್ 1970 ಎಸ್‌ಸಿ 1771*
ಶ್ರೀ ರಾಮಟಾನು ಕೋ–ಅಪರೇಟಿವ್ ಹೌಸಿಂಗ್
ಸೊಸೈಟಿ ಲಿಮಿಟೆಡ್ ಮತ್ತು ಮತ್ತೊಬ್ಬರು
–ವಿರುದ್ಧ– ಮಹಾರಾಷ್ಟ್ರ ರಾಜ್ಯ (ಉಲ್ಲೇ) 9
5. *(2014) 11 ಎಸ್‌ಸಿಸಿ 351*
ಬ್ರಿಜೇಶ್ ಕುಮಾರ್ ಮತ್ತು ಇತರರು –ವಿರುದ್ಧ–
ಹರಿಯಾಣ ರಾಜ್ಯ ಮತ್ತು ಇತರರು (ಉಲ್ಲೇ) 9
6. *(1994) 1 ಎಸ್‌ಸಿಸಿ 92*
ಗೌರಿಶಂಕರ್ ಗೌರ್ ಮತ್ತು ಇತರರು –ವಿರುದ್ಧ–
ಉತ್ತರ ಪ್ರದೇಶ ರಾಜ್ಯ ಮತ್ತು ಇತರರು (ಉಲ್ಲೇ) 9
7. *(1982) 1 ಎಸ್‌ಸಿಸಿ 125*
ವೆಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್ –ವಿರುದ್ಧ–
ವಿಶೇಷ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೋರ್‌ಬಾ
ಮತ್ತು ಮತ್ತೊಬ್ಬರು (ಉಲ್ಲೇ) 10
8. *(1973) 1 ಎಸ್‌ಸಿಸಿ 500*
ನಾಗಾಪುರ ಮೇಲ್ಪಾಟು ಟ್ರಸ್ಟ್ ಮತ್ತು ಮತ್ತೊಬ್ಬರು
–ವಿರುದ್ಧ– ವಿಠಲ್‌ರಾವ್ ಮತ್ತು ಇತರರು (ಉಲ್ಲೇ) 10
9. *ಎಐಆರ್ 1975 ಎಸ್‌ಸಿ 1835*
ಮಧ್ಯಪ್ರದೇಶ ರಾಜ್ಯ –ವಿರುದ್ಧ– ಎಂ.ವಿ. ನರಸಿಂಹನ್ (ಉಲ್ಲೇ) 10

10. *(1976) 4 ಸ.ನ್ಯಾ.ಮೊ. 9*
*ಭೂಸ್ವಾಧೀನಾಧಿಕಾರಿ, ನಗರ ಮೇಲ್ಪಾಟು*
*ನ್ಯಾಸ ಮಂಡಲಿ –ವಿರುದ್ಧ–*
*ಎಚ್. ನಾರಾಯಣಯ್ಯ ಮತ್ತು ಇತರರು (ಉಲ್ಲೇ) 10*

11. *(2002) 7 ಎಸ್‌ಸಿಸಿ 657*
*ನಾಗಪುರ ಮೇಲ್ಪಾಟು ಟ್ರಸ್ಟ್ –ವಿರುದ್ಧ–*
*ವಸಂತ ರಾವ್ ಮತ್ತು ಇತರರು (ಉಲ್ಲೇ) 10*

12. *(2003) 4 ಎಸ್‌ಸಿಸಿ 200*
*ಮಹರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ*
*–ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇತರರು (ಉಲ್ಲೇ) 10*

13. *(2010) 4 ಸ.ನ್ಯಾ.ಮೊ. 532*
*ಸ್ವರ್ಣಲತ –ವಿರುದ್ಧ– ಹರಿಯಾಣ ರಾಜ್ಯ (ಉಲ್ಲೇ) 14*

14. *2016 (2) ಎಕೆಆರ್ 737*
*ಶ್ರೀಮತಿ ಚಿಕ್ಕತಾಯಮ್ಮ ಮತ್ತು ಇತರರು*
*–ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 30*

ಅರ್ಜಿದಾರರ ಪರವಾಗಿ: ಶ್ರೀ ಎಸ್. ಮಹೇಶ್, ವಕೀಲರು ಇವರ ಪರವಾಗಿ
ಶ್ರೀ ಜಯಕುಮಾರ್ ಎಸ್. ಪಾಟೀಲ್, ಹಿರಿಯ ವಕೀಲರು.

4ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಗುರುದೇವ್ ಐ. ಗಚ್ಚಿನಮಠ,
ಇವರ ಪರವಾಗಿ ಡಿ.ಎಲ್.ಎನ್. ರಾವ್,
ಹಿರಿಯ ನ್ಯಾಯವಾದಿ.

1ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಅಶೋಕ್ ಎನ್. ನಾಯಕ್, ವಕೀಲರು.

1ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಆರ್.ಬಿ. ಸತ್ಯನಾರಾಯಣ ಸಿಂಗ್, ಎಜಿಎ.

## ಆಜ್ಞೆ

**ನ್ಯಾಯಮೂರ್ತಿ ಬಿ.ಎಸ್. ಪಾಟೀಲ್:**

1. ಅರ್ಜಿದಾರರೆಲ್ಲರೂ ಬೆಂಗಳೂರು ಪೂರ್ವತಾಲ್ಲೂಕಿನ ವರ್ತೂರು ಹೋಬಳಿಯ ಅಮಾನಿ ಬೆಳ್ಳಂದೂರು ಖಾನೆ ಗ್ರಾಮದಲ್ಲಿರುವ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಳಗೊಂಡಿರುವ ಕೃಷಿ ಭೂಮಿಗಳ ಮಾಲೀಕರಾಗಿರುವರು. ದಿನಾಂಕ 08.02.2006 ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಪ್ರಾಥಮಿಕ ಅಧಿಸೂಚನೆಯ ಮೂಲಕ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಸಂಕ್ಷಿಪ್ತವಾಗಿ 'ಕೆಐಎಡಿಬಿ') ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅಭಿವೃದ್ಧಿ ಪಡಿಸುವುದಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (ಸಂಕ್ಷಿಪ್ತ 'ಕೆಐಎಡಿ ಅಧಿನಿಯಮ') ದ ಪ್ರಕರಣ 28(1) ರಡಿಯಲ್ಲಿ ಉದ್ದೇಶಿತ ಪ್ರಶ್ನಿತ ಭೂಮಿಗಳನ್ನು ಸ್ವಾಧೀನ ಪಡಿಸಿಕೊಳ್ಳಲು ದಿನಾಂಕ 06.02.2006ರ ಪ್ರಾರಂಭಿಕ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಕೆಐಎಡಿಬಿ ಅಧಿನಿಯಮದ 3(1)ನೇ ಪ್ರಕರಣದ ಅಡಿಯಲ್ಲಿ ಕೈಗಾರಿಕಾ ಪ್ರದೇಶದ ಉದ್ಘೋಷಣೆಯ ಮೂಲಕ ಪೂರ್ವಭಾವಿಯಾಗಿ ಮಾಡಲಾಗಿತ್ತು. ಅರ್ಜಿದಾರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಸಂಕ್ಷಿಪ್ತವಾಗಿ ಬಿಡಿಎ) ದ ಕ್ರಮದ ಬಲದಿಂದಾಗಿ, ಬಿ.ಡಿ.ಎ. ನಿರ್ದಿಷ್ಟವಾಗಿ ಬೆಂಗಳೂರು ನಗರಕ್ಕಾಗಿ ವ್ಯಾಪಕ ಅಭಿವೃದ್ಧಿಯೋಜನೆಯನ್ನು ಅನುಮೋದಿಸುವ ಪ್ರಾಧಿಕಾರವಾಗಿದ್ದು ಆ ಪ್ರಾಧಿಕಾರದ ಯೋಜನೆಯಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ಅನ್ನು ಪ್ರಕಟಿಸಿದೆ. ಅದರಲ್ಲಿ ಯೋಜನಾ ಪ್ರದೇಶದೊಳಗೆ ಬರುವ ಪ್ರತಿಯೊಂದು ಜಮೀನಿನ ಭಾಗಗಳ ಸಂಬಂಧದಲ್ಲಿ ಬಳಕೆಯ ಭೂಮಿಯನ್ನು ತೋರಿಸಲಾಗಿದೆ, ಇದರಲ್ಲಿ, ಅರ್ಜಿದಾರರಿಗೆ ಸೇರಿದ ಜಮೀನುಗಳನ್ನು ವಸತಿ ಪ್ರದೇಶಗಳಂತೆ ವರ್ಗೀಕರಿಸಲಾಗಿದೆಯೆಂದು ಅರ್ಜಿದಾರರು ಒತ್ತಿಹೇಳಿದ್ದಾರೆ. ಉದ್ದೇಶಿತ ಭೂಸ್ವಾಧೀನವನ್ನು ಕೆಐಎಡಿಬಿ ಧೀರ್ಘಕಾಲವಾದರೂ ಸ್ವಾಧೀನವನ್ನು ಕೈಗೆತ್ತಿಕೊಳ್ಳುವುದಿಲ್ಲ ಹಾಗಾಗಿ ಪ್ರಸ್ತುತ ನಂಬಲರ್ಹವಾದ ಅಡಿಯಲ್ಲಿ ಅರ್ಜಿದಾರರ ಸಂಬಂಧದಲ್ಲಿ ಭೂಸ್ವಾಧೀನತೆಯು ಮುಂದುವರೆಸಬಾರದೆಂದು ಅವರೆಲ್ಲರೂ ಸಹ

ಒತ್ತಾಯಿಸಿದ್ದಾರೆ. 1ನೇ ಸಂಖ್ಯೆಯ ಅರ್ಜಿದಾರ ತನಗೆ ಸೇರಿದ ಸರ್ವೆ ನಂ. 371/1 ರಲ್ಲಿರುವ ಜಮೀನನ್ನು ಮಾರಾಟ ಮಾಡಲು ನಿರ್ಧರಿಸಿರುವಾಗ ಮತ್ತು ಖರೀದಿದಾರರು 1ನೇ ಸಂಖ್ಯೆಯ ಅರ್ಜಿದಾರರಿಗೆ ಸ್ವಾಧೀನೇತರ ಭೂಮಿ ಎಂದು ಪ್ರಕಟಪಡಿಸುವ ಪ್ರಮಾಣ ಪತ್ರ ಇಚ್ಛಿಸಿರುವುದರಿಂದ 1ನೇ ಸಂಖ್ಯೆಯ ಅರ್ಜಿದಾರನು ಕೋರಿದ ಅಂಥ ಪ್ರಮಾಣ ಪತ್ರದ ಸಂಬಂಧದಲ್ಲಿ ಅನುಬಂಧ–ಎಫ್ ನಲ್ಲಿರುವಂತೆ ರಾಜ್ಯ ಸರ್ಕಾರವು ದಿನಾಂಕ 17.12.2007 ರಂದು ಹೊರಡಿಸಿದ ಅಂತಿಮ ಅಧಿಸೂಚನೆಯನ್ನು ಮಾತ್ರವೇ ಕೆಐಎಡಿಬಿ ಅಧಿಕಾರಿಗಳು ಪ್ರದರ್ಶಿಸಿರುತ್ತಾರೆ ಮತ್ತು 19.09.2014 ರಂದು ಪ್ರಕಟಪಡಿಸಿದ ಸ್ವಾಧೀನಕ್ಕೊಳಪಡುವ ಭೂಮಿಗೆ ಯಾವುದೇ ನಿರಾಕ್ಷೇಪಣೆ ಪ್ರಮಾಣ ಪತ್ರವನ್ನು ನೀಡದಿರುವುದನ್ನು ಸಹ ಪ್ರಕಟ ಪಡಿಸಿರುತ್ತಾರೆ. ಆದುದರಿಂದ 1ನೇ ಸಂಖ್ಯೆಯ ಅರ್ಜಿದಾರರು ಅಂಥ ಪ್ರಮಾಣ ಪತ್ರದ ಅಗತ್ಯತೆಯನ್ನು ನಿವೇದಿಸಿದ್ದಾರೆ. ತದನಂತರದಲ್ಲಿ ಸ್ವಾಧೀನ ಪ್ರಕ್ರಿಯೆಯ ಸಂಬಂಧದಲ್ಲಿ ಹೆಚ್ಚಿನ ವಿವರಗಳನ್ನು ಪಡೆದುಕೊಂಡಿರುವುದರಿಂದ ಅರ್ಜಿದಾರರು, ಸ್ವಾಧೀನವನ್ನು ಪ್ರಶ್ನಿಸಿ ಸಂಬಂಧದಲ್ಲಿ ಈ ನ್ಯಾಯಾಲಯದ ಸಹಾಯವನ್ನು ಕೋರಿರುವರು. ಹಾಗಾಗಿ ಈ ನ್ಯಾಯಾಲಯದ ಮೂಲಕ ಅರ್ಜಿದಾರರು ತಮ್ಮ ಜಮೀನಿನ ಸ್ವಾಧೀನಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುವರು.

2. ಇಲ್ಲಿನ ಪ್ರತ್ಯರ್ಜಿದಾರರ ಸಂಖ್ಯೆ – 4 ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಸಂಕ್ಷಿಪ್ತವಾಗಿ ಬಿಡಬ್ಲ್ಯೂಎಸ್‌ಎಸ್‌ಬಿ) ಇವರು ಒಳಚರಂಡಿ ನೀರಿನ ಸಂಸ್ಕರಣಾ ಘಟಕವನ್ನು ಪ್ರಾರಂಭಿಸುವುದಕ್ಕಾಗಿ ಅರ್ಜಿದಾರರ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಸ್ತಾವನೆಯ ಯಾವುದೇ ನೋಟಿಸನ್ನು ಮಂಡಳಿಯು ಅರ್ಜಿದಾರರಿಗೆ ಜಾರಿಮಾಡದಿರುವ ಅಂಶವನ್ನು ಅರ್ಜಿದಾರರು ವಾದಿಸಿರುವರು. ಮಂಡಳಿಯು ಅರ್ಜಿದಾರರನ್ನು ಸದರಿ ಸ್ವಾಧೀನ ಪ್ರಕ್ರಿಯೆಯಿಂದ ಮತ್ತು ಅಂತಿಮ ಅಧಿಸೂಚನೆಗೆ ಅನುಸಾರವಾಗಿ ಹೆಚ್ಚಿನ ಎಲ್ಲಾ ಪ್ರಕ್ರಿಯೆಗಳಿಂದಲೂ ಅವರನ್ನು ಸಂಪೂರ್ಣವಾಗಿ ಕತ್ತಲಲ್ಲಿ ಇಟ್ಟಿರುವುದನ್ನು ನಿವೇದಿಸಿರುವರು. ಅರ್ಜಿದಾರರು ತಮ್ಮ ಜಮೀನಿಗೆ ನಿಗದಿಪಡಿಸಿದ ಪರಿಹಾರವನ್ನಾಗಲೀ ಸಂದಾಯ ಮಾಡಿದ ಅಥವಾ ಠೇವಣಿ ಇಡಲಾದ ಪರಿಹಾರ ಮೊತ್ತಕ್ಕೆ ಸಂಬಂಧಿಸಿದ ಯಾವುದೇ

ನೋಟೀಸನ್ನು ಸಹ ತಮಗೆ ಜಾರಿ ಮಾಡದಿರುವುದನ್ನು, ಅರ್ಜಿಯಲ್ಲಿ ವಾದಿಸಿರುವರು. ಅರ್ಜಿದಾರರು, ವಿಶೇಷ ಭೂಸ್ವಾಧೀನ ಅಧಿಕಾರಿ, ಕೆಐಎಡಿಬಿ ಇವರಿಗೆ ಸಲ್ಲಿಸಿರುವ ಆರ್‌ಟಿಐ ಅರ್ಜಿಯ ಪ್ರತಿಯನ್ನು ಸಹ ಇದರೊಂದಿಗೆ ಸಲ್ಲಿಸಿರುವರು ಮತ್ತು ಕೆಐಎಡಿಬಿಯೂ ಆರ್‌ಟಿಐ ಅರ್ಜಿಗೆ ಕೊಟ್ಟಿರುವ ಪ್ರತ್ಯುತ್ತರದಲ್ಲಿ ಪರಿಹಾರ ಮೊತ್ತವನ್ನು ಸಂದಾಯಮಾಡದಿರುವ, ಠೇವಣಿ ಇಡದಿರುವ ಬಗೆಗೆ ಅದು ಅನುಕ್ರಮವಾಗಿ ಅನುಬಂಧ–ಜಿ ಮತ್ತು ಜಿ1 ರಲ್ಲಿ ತೋರಿಸಿರುವ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವರು. ಅರ್ಜಿದಾರರು ಆಕ್ಷೇಪಿತ ಜಮೀನುಗಳ ಸಂಬಂಧದಲ್ಲಿನ ಎಲ್ಲಾ ಕಂದಾಯ ದಾಖಲೆಗಳಲ್ಲಿ ಅರ್ಜಿದಾರರ ಹೆಸರುಗಳನ್ನು ಸ್ವತ್ತುಗಳ ಒಡೆತನ ಮತ್ತು ಅಧಿಬೋಗ ಹೊಂದಿರುವಂತೆ ಮತ್ತು ಸ್ವತ್ತುಗಳ ಮಾಲೀಕರಂತೆ ತೋರಿಸಲಾಗಿರುವ ಅಂಶಗಳನ್ನು ಗಮನಕ್ಕೆ ತಂದಿರುವರು. ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವ ಹಾಗೇ ಮಹಜರ್ ಮಾಡಿರುವಂತೆ ಸುಳ್ಳು ಹೇಳಿಕೆಗಳನ್ನು ಗ್ರಾಮಸ್ಥರು ಹೇಳಿರುವಂತೆ ಮಹಜರ್‌ನ್ನು ಸೃಜಿಸಲಾಗಿದೆ ಆದರೆ ಗ್ರಾಮಸ್ಥರು ಸುಳ್ಳು ಹೇಳಿಕೆಗಳಿರುವ ಮಹಜರಿಗೆ ಸಹಿ ಮಾಡಲು ತಿರಸ್ಕರಿಸಿರುವ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತಂದಿರುವರು.

3. ಭೂಸ್ವಾಧೀನತೆಯಲ್ಲಿ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ನ್ಯಾಯೋಚಿತ ಪರಿಹಾರ ಪಡೆಯುವ ಹಾಗೂ ಪಾರದರ್ಶಕತೆ ಕಾಪಾಡುವ ಹಕ್ಕು ಅಧಿನಿಯಮ, 2013 (ಸಂಕ್ಷಿಪ್ತವಾಗಿ 'ಹೊಸ ಅಧಿನಿಯಮ') ರಲ್ಲಿರುವ ನಿಬಂಧನೆಗಳಲ್ಲಿರುವಂತೆ ಹೊಸ ಅಧಿನಿಯಮ ಪ್ರಾರಂಭವಾದ ದಿನಾಂಕದಂದು ಇದ್ದಂತೆ ಐತೀರ್ಪು ನೀಡಿದ ತರುವಾಯ 5 ವರ್ಷಗಳು ಮತ್ತು ಅದಕ್ಕಿಂಥ ಹೆಚ್ಚಿನ ಅವಧಿಯು ಕಳೆದಿದ್ದರೂ, ಸ್ವಾಧೀನವನ್ನು ತೆಗೆದುಕೊಳ್ಳದೆ ಇಲ್ಲವೆ ಪರಿಹಾರವನ್ನು ಸಂದಾಯ ಮಾಡದೇ, ಇದ್ದಲ್ಲಿ ಸ್ವಾಧೀನತೆಯ ಪ್ರಕ್ರಿಯೆಯೇ ಸ್ಥಗಿತಗೊಳ್ಳುತ್ತದೆ. ಅರ್ಜಿದಾರರು, ಸಾರ್ವಜನಿಕ ಉದ್ದೇಶಗಳು ಒಳಗೊಳ್ಳುವ ವಿವಿಧ ಮೂಲ ಸೌಕರ್ಯ ಯೋಜನೆಗಳಿಗಾಗಿ ವಿವಿಧ ಸಾರ್ವಜನಿಕ ಉದ್ದಿಮೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಮತ್ತು ಮಳೆ ನೀರುಕೊಯ್ಲು ಮತ್ತು ಜಲಸಂರಕ್ಷಣಾ ರಚನೆಗಳು ಮತ್ತು ನೈರ್ಮಲೀಕರಣದ ಉದ್ದೇಶಕ್ಕಾಗಿ ಭೂಸ್ವಾಧೀನತೆಗೆ ಈ

ಹೊಸ ಅಧಿನಿಯಮ ಅನ್ವಯವಾಗುತ್ತದೆಂದು ಸಹ ಅವರು ವಾದಿಸಿದ್ದಾರೆ. ಆದುದರಿಂದ, ಅರ್ಜಿದಾರರ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಇಲ್ಲಿನ ಪ್ರತ್ಯಾರ್ಜಿದಾರರ ಸಂ.4 ಬಿಡಬ್ಲ್ಯೂಎಸ್ಎಸ್‌ಬಿ ಯ ಪ್ರಯೋಜನಕ್ಕಾಗಿ ಈ ಹೊಸ ಅಧಿನಿಯಮದ ಪ್ರಕರಣ 2(ಬಿ)(iv)ಯ ಅಡಿಯಲ್ಲಿ ನೈರ್ಮಲೀಕರಣವನ್ನು ಒಳಗೊಳ್ಳುವ ಅದೇ ರೀತಿಯ ಒಳಚರಂಡಿ ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದಕ್ಕಾಗಿ ಅರ್ಜಿದಾರರ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೆಂದು ಸಹಾ ವಾದಿಸಿದ್ದಾರೆ. ಅರ್ಜಿದಾರರ ಜಮೀನುಗಳ ಸ್ವಾಧೀನತೆಗೆ ಈ ಹೊಸ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಿರುವುದರಿಂದ, ಅರ್ಜಿದಾರನು ಈ ಹೊಸ ಅಧಿನಿಯಮದ ಅಡಿಯಲ್ಲಿ ಫಲಾನುಭವದ ಎಲ್ಲ ಹಕ್ಕುಗಳನ್ನು ಪಡೆಯಲು ಹಕ್ಕುಳ್ಳವರಾಗಿರುವರೆಂದೂ ನಿವೇದಿಸಿದ್ದಾರೆ.

4. ಪ್ರತ್ಯರ್ಜಿದಾರರು, ಅರ್ಜಿದಾರರ ಆಕ್ಷೇಪಣೆಗಳನ್ನು ಹೇಳಿಕೆಗಳನ್ನು ದಾಖಲಿಸುವ ಮೂಲಕ ಅರ್ಜಿಗೆ ಪ್ರತಿರೋಧ ವ್ಯಕ್ತಪಡಿಸಿರುವರು. ಅಂತಿಮ ಅಧಿಸೂಚನೆಯು ಹೊರಡಿಸಿದ ದಿನಾಂಕದಿಂದ 7 ವರ್ಷಗಳ ನಂತರದಲ್ಲಿ ಅರ್ಜಿದಾರರು ದೂರನ್ನು ದಾಖಲಿಸಿರುವುದು ವಿಳಂಬತೆಯ ಮತ್ತು ವ್ಯರ್ಥ ಪ್ರಯತ್ನವಾಗಿದೆ ಎಂಬ ಅಂಶವನ್ನು ಪ್ರತ್ಯರ್ಜಿದಾರರು ನಿವೇದಿಸಿದ್ದಾರೆ. ಪ್ರತ್ಯರ್ಜಿದಾರರು, ಸಾರ್ವಜನಿಕರ ಉದ್ದೇಶಕ್ಕಾಗಿ ತ್ಯಾಜ್ಯ ವಿಲೇವಾರಿಯ ಪರಿಮಾಣಕ್ಕೆ ಸಂಬಂಧ ಪಟ್ಟಂತೆ ಒಳಚರಂಡಿ ನೀರಿನ ಸಂಸ್ಕರಣೆಗಳಿಗೆ ಹೆಚ್ಚಿನ ಒತ್ತು ನೀಡುವ ಉದ್ದೇಶದಿಂದಲೇ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಒಳಚರಂಡಿ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದು ಈಗೀನ ಬಹುಮುಖ್ಯ ಪ್ರಾಧಾನ್ಯತೆಯಾಗಿರುವಂತಹ ಪ್ರಮುಖಾಂಶವನ್ನು ಎತ್ತಿ ತೋರಿಸಿರುವರು. ಅವರು ಒಳಚರಂಡಿ ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸುವುದಕ್ಕಾಗಿ ಬಹಳಷ್ಟು ಕಾರ್ಯ ಸಾಧ್ಯವಾಗಬಹುದಾದ ಜಮೀನುಗಳು ಪ್ರಶ್ನಿತ ಜಮೀನುಗಳಾಗಿರುವ ಅಂಶವನ್ನು ದಾಖಲಿಸಿರುವರು. ಆದುದರಿಂದ ಅವರು ಇದೇ ಅಧಿಸೂಚನೆಯ ಅಡಿಯಲ್ಲಿ, ಇದೇ ಉದ್ದೇಶಕ್ಕಾಗಿ ಭಾರೀ ವಿಸ್ತಾರವಾದ ಭೂಪ್ರದೇಶವನ್ನು ಅಧಿಸೂಚಿಸಲಾಗಿತ್ತು ಮತ್ತು ರಿಟ್ ಅರ್ಜಿ ಸಂ.5650/2008 ರೊಂದಿಗೆ ಮಿಳಿತವಾದ ರಿಟ್ ಅರ್ಜಿ ಸಂಖ್ಯೆಗಳು 6326–6343/2009 ರಲ್ಲಿ

ಇದೇ ಅಧಿಸೂಚನೆಯನ್ನು ಕೆಲ ಭೂಮಾಲೀಕರು ಆಕ್ಷೇಪಣೆಯನ್ನು ಎತ್ತಿರುವುದನ್ನು ದಾಖಲಿಸಿರುವರು. ಸದರಿ ರಿಟ್ ಅರ್ಜಿಗಳು ವಜಾಗೊಂಡಿದ್ದವು ಮತ್ತು ಅದರಿಂದಾಗಿ ಸ್ವಾಧೀನತೆ ಪ್ರಶ್ನೆಯು ಅಂತಿಮತೆಯನ್ನು ಪಡೆದುಕೊಂಡಿರುವುದರಿಂದ, ಪ್ರಸ್ತುತ ರಿಟ್ ಅರ್ಜಿ ಊರ್ಜಿತವಾಗುವುದಿಲ್ಲವೆಂದು ವಾದಿಸಿದ್ದಾರೆ.

5. ಬಿಡಬ್ಲ್ಯೂಎಸ್‌ಎಸ್‌ಬಿ – 4ನೇ ಪ್ರತ್ಯರ್ಜಿದಾರ ಕೆಐಎಡಿಬಿಗೆ ಭೂಸ್ವಾಧೀನತೆಯ ವೆಚ್ಚವಾಗಿ ₹ 13,13,00,390/– ರೂಪಾಯಿಗಳನ್ನು ಈಗಾಗಲೇ ಠೇವಣಿಯಾಗಿ ಇಟ್ಟಿರುವ ಅಂಶವನ್ನು ಅದು ದಾಖಲಿಸಿದೆ ಮತ್ತು ಅದು ಬೆಂಗಳೂರು ನಗರ ಪ್ರದೇಶದೊಳಗೆ ಮತ್ತು ನಗರದ ಸುತ್ತಲೂ ಇರುವ ಕೆರೆಗಳೊಳಗೆ ಮಳೆ ನೀರು ತೆರೆದ ಚರಂಡಿಗಳ ಮೂಲಕ ಹರಿಯುವುದನ್ನು ಮತ್ತೆ ಮಳೆ ನೀರು ತೆರೆದ ಚರಂಡಿಗಳೊಳಗೆ ಒಳಚರಂಡಿ ನೀರು ಹರಿಯುವುದನ್ನು ತಡೆಯುವುದಕ್ಕೆ ಕೈಗೆತ್ತಿಕೊಂಡಿರುವ ಕಾಮಗಾರಿಯು ಅತಿಮುಖ್ಯವಾದ ಹಾಗೂ ಉತ್ತಮ ರೀತಿಯ ಕಾಮಗಾರಿಯಾಗಿರುವುದರಿಂದ ಈ ರಿಟ್ ಅರ್ಜಿಯಲ್ಲಿ ಪ್ರತಿಪಾದಿಸಿರುವ ಯೋಜನೆಯನ್ನು ತಡೆಯುವುದಕ್ಕೆ ಅರ್ಜಿದಾರರ ಸಮರ್ಥನೆಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ.

6. ನಾನು, ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಜಯಕುಮಾರ್ ಎಸ್. ಪಾಟೀಲ್ ಇವರ ವಾದವನ್ನು, ಪ್ರತ್ಯರ್ಜಿದಾರ ಸಂ.4 ಬಿಡಬ್ಲ್ಯೂಎಸ್‌ಎಸ್‌ಬಿ ಪರವಾಗಿ ಹಾಜರಾದ ಮಾನ್ಯ ಶ್ರೀ ಡಿ.ಎಲ್.ಎನ್. ರಾವ್, ನ್ಯಾಯವಾದಿಗಳು ಮತ್ತು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಮಂಡಿಸಿದ ವಾದವನ್ನು ಆಲಿಸಿರುತ್ತೇನೆ.

7. ಇಲ್ಲಿ ಭೂಸ್ವಾಧೀನತೆಯಲ್ಲಿ ನ್ಯಾಯೋಚಿತ ಪರಿಹಾರಕ್ಕೆ ಮತ್ತು ಪಾರದರ್ಶಕತೆ, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆಗೆ ಹಕ್ಕು ಅಧಿನಿಯಮ, 2013 ರ ಉಪಬಂಧಗಳು ಅರ್ಜಿದಾರರ ಜಮೀನುಗಳಿಗೆ ಅನ್ವಯವಾಗಬಹುದೇ

ಎಂಬ ಪ್ರಧಾನ ಪ್ರಶ್ನೆಯು ಉದ್ಭವವಾಗಿದೆ? ಹೊಸ ಅಧಿನಿಯಮದ ಉಪಬಂಧಗಳು ಅನ್ವಯವಾದ್ದಲ್ಲಿ, ಹೊಸ ಅಧಿನಿಯಮದ ಪ್ರಕರಣ 24(2)ನ್ನು ಹೇಗೆ ಅನ್ವಯಿಸುವುದು? ಮತ್ತು ಪರಿಣಾಮಗಳೇನು? ಎಂಬ ಪ್ರಶ್ನೆಯು ಪ್ರಧಾನವಾಗಿ ಉದ್ಭವವಾಗುತ್ತದೆ.

8. ಪ್ರತ್ಯರ್ಜಿದಾರ ಸಂ.4 ಇವರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಡಿ.ಎಲ್.ಎನ್. ರಾವ್ ಅವರು, ಕೆಐಎಡಿ ಅಧಿನಿಯಮ ಸ್ವತಃ ಸಂಪೂರ್ಣ ಸಂಹಿತೆಯಾಗಿರುವುದಾಗಿದೆ ಮತ್ತು ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಿ ನಿಯಮಿಸಿದ ಪರಿಮಿತಿಯ ಅಂಶವು ಕೆಐಎಡಿ ಅಧಿನಿಯಮ ಅಥವಾ ಆ ವಿಷಯಕ್ಕೊಳಪಟ್ಟ ಬಿಡಿಎ ಅಧಿನಿಯಮದ ಅಡಿಯಲ್ಲಿ ಬರುವುದಿಲ್ಲವೆಂಬುದನ್ನು ಪ್ರಸ್ತಾಪಿಸಿರುವರು; ವಾಸ್ತವವಾಗಿ, ಇದನ್ನು ಅಪೆಕ್ಸ್ ನ್ಯಾಯಾಲಯವು ಎತ್ತಿ ಹಿಡಿದಿರುವಂತೆ ಭೂಸ್ವಾಧೀನತೆ ಅಧಿನಿಯಮದ 6ನೇ ಪ್ರಕರಣದ ಅಡಿಯಲ್ಲಿ ಅಂತಿಮ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ನಿಯಮಿಸಿದ ಆ 2 ವರ್ಷಗಳ ಅವಧಿಯಲ್ಲಿ ಬಿಡಿಎ ಅಧಿನಿಯಮದ ಮೇರೆಗಿನ ಸ್ವಾಧೀನತೆಗೆ ಭೂಸ್ವಾಧೀನತೆ ಅಧಿನಿಯಮವು ಅನ್ವಯವಾಗುವುದಿಲ್ಲ ಎಂದು ನೀಡಿರುವ ತೀರ್ಪುನ್ನು ಇಲ್ಲಿ ಉಲ್ಲೇಖಿಸಿರುವರು. ನ್ಯಾಯವಾದಿಗಳು ಅದಕ್ಕೆ ಅವಲಂಬಿತವಾಗಿರುವ ತೀರ್ಪುಗಳನ್ನು ಈ ಕೆಳಗೆ ಉಲ್ಲೇಖಿಸಿರುವರು.

1. ***ಎಂ. ನಾಗಭೂಷಣ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** [1] ;

2. ***ಆಫ್‌ಶೋರ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರರು*** [2] ;

1. ಎಐಆರ್ 2011 ಎಸ್‌ಸಿ 1113

2. (2011) 3 ಎಸ್‌ಸಿಸಿ 139

3. ***ಗಿರ್‌ನಾರ್ ಟ್ರೇಡರ್ಸ್ (3) –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇತರರು*** [3] .

9. ನ್ಯಾಯವಾದಿಗಳು, ***ಶ್ರೀ ರಾಮತನು ಕೋ–ಅಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್ ಮತ್ತು ಮತ್ತೊಬ್ಬರು –ವಿರುದ್ಧ– ಮಹಾರಾಷ್ಟ್ರ ರಾಜ್ಯ*** [4] ನ ಪ್ರಕರಣದಲ್ಲಿನ ತೀರ್ಪನ್ನು ಸಹ ಅವಲಂಬಿತ ತೀರ್ಪಾಗಿ ಉಲ್ಲೇಖಿಸುತ್ತಾ. ಕೇಂದ್ರ ಅಧಿನಿಯಮ ಮತ್ತು ಕೆಐಎಡಿ ಅಧಿನಿಯಮದ ಉಪಬಂಧಗಳ ನಡುವೆ ವಿರುದ್ಧವಾಗಿರದ ಸತ್ವಸಾರಸಿದ್ಧಾಂತವನ್ನು ಅನ್ವಯಿಸಿವುದಕ್ಕೆ ಒತ್ತಾಯಿಸಿದ್ದಾರೆ. ಅವರು, ಅರ್ಜಿಯನ್ನು ವಿಳಂಬತೆ ಮತ್ತು ವ್ಯರ್ಥ ಪ್ರಯತ್ನದ ಆಧಾರದ ಮೇಲೆ ವಜಾ ಮಾಡಬಹುದಾದ ಸಾಧ್ಯತೆಗೆ ***ಬ್ರಿಜೇಶ್ ಕುಮಾರ್ ಮತ್ತು ಇತರರು –ವಿರುದ್ಧ– ಹರಿಯಾಣ ರಾಜ್ಯ ಮತ್ತು ಇತರರು*** [5] ಪ್ರಕರಣದಲ್ಲಿನ ತೀರ್ಪುಗಳನ್ನು ಅದಕ್ಕೆ ಅವಲಂಬಿತವಾದ ತೀರ್ಪಾಗಿ ಉಲ್ಲೇಖಿಸಿರುವರು. ಅವರು, ಭೂಸ್ವಾಧೀನತೆ ಅಧಿನಿಯಮ, 1894ರ ಉಪಬಂಧನೆಗಳಿಗೆ ಅವಲಂಬಿತವಾಗಿರುವ ಕೆಐಎಡಿ ಅಧಿನಿಯಮದ 30ನೇ ಪ್ರಕರಣವನ್ನು ವಿಚಾರಣೆ, ತೀರ್ಪು, ಉಲ್ಲೇಖ ಮುಂತಾದವುಗಳ ಸಂಬಂಧದಲ್ಲಿ ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯ ಮಾಡಬೇಕಾದದ್ದನ್ನು ಮತ್ತು ಅದನ್ನು ಶಾಸನ ರಚನೆಯ ಸಂದರ್ಭದಲ್ಲಿ ಸೇರಿಸುವುದನ್ನು ಸಹ ತಮ್ಮ ವಾದದಲ್ಲಿ ಪ್ರಸ್ತುತ ಪಡಿಸಿರುವರು. ಆದುದರಿಂದ ಭೂಸ್ವಾಧೀನತೆ ಅಧಿನಿಯಮ, 1894ಕ್ಕೆ ಆಗಿರುವ ಯಾವುದೇ ತಿದ್ದುಪಡಿ, ನಿರಸಿತವು ಒಳಗೊಂಡಂತೆ ಬದಲಾವಣೆಯನ್ನು 2013ರ ಅಧಿನಿಯಮ ಸಂಖ್ಯೆ 30 ರಲ್ಲಿ ಕೆಐಎಡಿ ಅಧಿನಿಯಮದ 30ನೇ ಪ್ರಕರಣಕ್ಕೆ ಬಾಧಕವಾಗದಂತೆ ಮತ್ತು ಭೂಸ್ವಾಧೀನತೆಯ ಅಧಿನಿಯಮ, 1894ರ ಕೋರಿಕೆಗಳನ್ನು ವ್ಯಾಪಕವಾಗಿ ನಿಗಮನಗೊಳಿಸಿರುವ ಅಂಶವನ್ನು ನ್ಯಾಯಾಲಯದ ಗಮನಕ್ಕೆ ತಂದಿರುವರು. ಈ ಸಂಬಂಧದಲ್ಲಿ, ಅವರು ***ಗೌರಿಶಂಕರ್ ಗೌರ್ ಮತ್ತು ಇತರರು –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಇತರರು*** [6] ಪ್ರಕರಣದ ತೀರ್ಪನ್ನು ಅವಲಂಬಿತವಾಗಿ ತೆಗೆದುಕೊಳ್ಳಲು ಸಹ ಒತ್ತಾಯಿಸಿರುವರು.

3. (2011) 3 ಎಸ್‌ಸಿಸಿ 1
4. ಎಐಆರ್ 1970 ಎಸ್‌ಸಿ 1771
5. (2014) (11) ಎಸ್‌ಸಿಸಿ 351
6. (1994) 1 ಎಸ್‌ಸಿಸಿ 92

10. ಪ್ರತ್ಯುತ್ತರವಾಗಿ, ಅರ್ಜಿದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಜಯಕುಮಾರ್ ಎಸ್. ಪಾಟೀಲ್ ಇವರು ಹಾಜರಾಗಿ, ಕೆಐಎಡಿಯ 30ನೇ ಪ್ರಕರಣದಂತೆ ಭೂಸ್ವಾಧೀನತೆ ಅಧಿನಿಯಮದ ಉಪಬಂಧಗಳಿಗೆ ಮಾಡಲಾದ ತಿದ್ದುಪಡಿಗಳು ತಾರ್ಕಿಕ ವ್ಯಾಪಕತೆಯೂ ಅನ್ವಯವಾಗದಿರುವ ಸಂಬಂಧದಲ್ಲಿನ ಸಮರ್ಥನೆಗಳ ವಾದಾಂಶವಾಗಿದ್ದರೆ. ಅದರಂತೆ ಹೆಚ್ಚುವರಿ ಮೊಬಲಗಿನ ಸಂದಾಯ ಸಂಬಂಧದಲ್ಲಿ ಭೂಸ್ವಾಧೀನತೆ ಅಧಿನಿಯಮದ 23(1ಎ) ಪ್ರಕರಣದ ಉಪಬಂಧಗಳು, ಶೇ 30 ರಷ್ಟು ಹೆಚ್ಚಿಗೆ ಪರಿಹಾರದ ಹಣ ಸಂಬಂಧದಲ್ಲಿ 23(2)ನೇ ಪ್ರಕರಣ ಮತ್ತು 1994ರ ಅಧಿನಿಯಮ 68 ರಲ್ಲಿ ಮಾಡಲಾದ ತಿದ್ದುಪಡಿಯಂತೆ ಬಡ್ಡಿ ಸಂದಾಯದ ಸಂಬಂಧದಲ್ಲಿ ಸಹ ಕೆಐಎಡಿ ಅಧಿನಿಯಮದ 28 ನೇ ಪ್ರಕರಣದ ಅಡಿಯಲ್ಲಿ ಸ್ವಾಧೀನಕ್ಕೊಳಪಡುವ ಭೂಮಿಗಳಿಗೂ ಅದು ಅನ್ವಯವಾಗುವುದಿಲ್ಲ ಮತ್ತು ಇದರ ಪರಿಣಾಮ ಭೂಮಾಲೀಕರು ಅತಿ ಕಡಿಮೆ ಸಂದಾಯಕ್ಕೆ ಹಕ್ಕುಳ್ಳವರಾಗುವರು, 1984 ರ ಅಧಿನಿಯಮ 68 ರಲ್ಲಿನ ಮಾಡಿದ ತಿದ್ದುಪಡಿಗೆ ಪೂರ್ವದ ಸ್ಥಿತಿಯಲ್ಲಿರುವಂತೆ ಭೂ ಸ್ವಾಧೀನತೆ ಅಧಿನಿಯಮ ತಿದ್ದುಪಡಿಯಾಗದಿರುವ ಉಪಬಂಧಗಳ ಆಧಾರದ ಮೇಲೆ ಕಡಿಮೆ ಪರಿಹಾರ ಸಂದಾಯಕ್ಕೆ ಭೂಮಾಲೀಕರು ಹಕ್ಕುಳ್ಳವರಾಗಿರುವುದನ್ನು ತಮ್ಮ ವಾದದಲ್ಲಿ ಸಮರ್ಥವಾಗಿ ಮಂಡಿಸಿರುವರು. ಅದರಂತೆ ಅವರು ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಿ ಸ್ವಾಧೀನಗೊಂಡ ಭೂಮಿಗಳ ಮಾಲೀಕರುಗಳಿಗೆ ಸಂದಾಯವಾಗುವ ಪರಿಹಾರದ ವಿಷಯದಲ್ಲಿ ಮತ್ತು ಕೆಐಎಡಿ ಅಧಿನಿಯಮದ ಅಡಿಯಲ್ಲಿ ಸ್ವಾಧೀನಗೊಂಡ ಭೂಮಿಗಳ ಮಾಲೀಕರುಗಳಿಗೆ ಸಂದಾಯವಾಗುವ ಪರಿಹಾರದ ವಿಷಯದಲ್ಲಿ ಆಗಿರುವ ತಾರತಮ್ಯತೆಯನ್ನು ನಿರೂಪಿಸಿರುವರು ಮತ್ತು ಆಗಿರುವ ತಾರತಮ್ಯತೆಯಿಂದ ಸಂವಿಧಾನದ 14ನೇ ಅನುಚ್ಛೇಧವು ಉಲ್ಲಂಘನೆ ಯಾಗಿರುವುದನ್ನು ಸಹ ನ್ಯಾಯಾಲಯದ ಗಮನಕ್ಕೆ ತಂದಿರುವರು. ಈ ಸಂಬಂಧದಲ್ಲಿ ಈ ಪ್ರಕರಣಕ್ಕಾಗಿ ಅವಲಂಬಿಸಿದ ಪ್ರಕರಣವಾಗಿ ***ವೆಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್ –ವಿರುದ್ಧ– ವಿಶೇಷ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೋರ್‌ಬಾ ಮತ್ತು ಮತ್ತೊಬ್ಬರು*** [7] ರ ಪ್ರಕರಣದಲ್ಲಿ

7. (1982) 1 ಎಸ್‌ಸಿಸಿ 125

ಅಪೆಕ್ಸ್ ನ್ಯಾಯಾಲಯದ ತೀರ್ಪಿನ ಉಲ್ಲೇಖವನ್ನು ನಿರೂಪಿಸುತ್ತಾರೆ, ಈ ಪ್ರಕರಣದ (16ನೇ ಪ್ಯಾರಾಗ್ರಾಫ್) ಭೂಸ್ವಾಧೀನತೆ ಅಧಿನಿಯಮದ ಉಪಬಂಧಗಳ ಸಂಬಂಧದಲ್ಲಿ ತರುವಾಯದ ತಿದ್ದುಪಡಿಗಳನ್ನು ಸೇರಿಸುವ ಮುಂಚೆ ಹೊಂದಿಕೊಳ್ಳದಿರುವ ಅಥವಾ ನಿರುಪಾಧಿಕ ಪ್ರಸ್ತಾವನೆಗಳು ಇಲ್ಲದಿರುವ ತಿದ್ದುಪಡಿಗಳನ್ನು ಅನ್ವಯ ಮಾಡಿಕೊಳ್ಳಬಾರದೆಂದು ತಿಳಿಸುವ ತೀರ್ಪನ್ನು ಇಲ್ಲಿ ಉಲ್ಲೇಖಿಸುತ್ತಾರೆ. ಈ ಸಂಬಂಧದಲ್ಲಿ ಅವಲಂಬಿತವಾಗುವ ಈ ಕೆಳಗಿನ ಪ್ರಕರಣಗಳ ತೀರ್ಪುಗಳನ್ನು ಸಹ ಮುಂದಿಡುತ್ತಾರೆ:–

1. ***ನಾಗಾಪುರ ಮೇಲ್ಪಾಟು ಟ್ರಸ್ಟ್ ಮತ್ತು ಮತ್ತೊಬ್ಬರು –ವಿರುದ್ಧ– ವಿಠಲ್‌ರಾವ್ ಮತ್ತು ಇತರರು*** [8] ;

2. ***ಮಧ್ಯ ಪ್ರದೇಶ ರಾಜ್ಯ –ವಿರುದ್ಧ– ಎಂ.ವಿ. ನರಸಿಂಹನ್*** [9];

3. ***ಭೂಸ್ವಾಧೀನಾಧಿಕಾರಿ, ನಗರ ಮೇಲ್ಪಾಟು ಟ್ರಸ್ಟ್ ಮಂಡಳಿ –ವಿರುದ್ಧ– ಎಚ್. ನಾರಾಯಣಯ್ಯ ಮತ್ತು ಇತರರು*** [10] ;

4. ***ನಾಗಪುರ ಮೇಲ್ಪಾಟು ಟ್ರಸ್ಟ್ –ವಿರುದ್ಧ– ವಸಂತ ರಾವ್ ಮತ್ತು ಇತರರು*** [11] ;

5. ***ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇತರರು*** [12] ;

11. ಶಾಸನ ರಚನೆ ಮಾಡುವಾಗ, ಹೊಸ ಅಧಿನಿಯಮದೊಳಗಿನ ಆ ಎಲ್ಲಾ ಪ್ರಕರಣಗಳನ್ನು ಲಿಖಿತದಲ್ಲಿ ವಾಸ್ತವವಾಗಿ ಇರುವ ಬರವಣಿಗೆ ಅಥವಾ

8. (1973) 1 ಎಸ್‌ಸಿಸಿ 500
9. ಎಐಆರ್ 1975 ಎಸ್‌ಸಿ 1835
10. (1976) 4 ಎಸ್‌ಸಿಸಿ 9
11. (2002) 7 ಎಸ್‌ಸಿಸಿ 657
12. (2003) 4 ಎಸ್‌ಸಿಸಿ 200

ಮುದ್ರಣ ರೂಪದಲ್ಲಿ ಸೇರಿಸಬೇಕಾದದು ಸತ್ಯ. ಆದುದರಿಂದ, ಈ ಮುಂಚಿನ ಅಧಿನಿಯಮದ ನಿರಸಿತ ಉಪಬಂಧಗಳು ಅಥವಾ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಟುಗಳು ಅನ್ವಯಿಸುವ ಅಧಿನಿಯಮ ಮೇಲೆ ಪರಿಣಾಮ ಹೊಂದಿರುವುದಿಲ್ಲ ಆದರೆ ಅದನ್ನು ಹೊಸ ಶಾಸನದ ಭಾಗವೆಂದು ಪರಿಗಣಿಸುವುದು ಮತ್ತು ಮೂಲ ಅಧಿನಿಯಮ ಯಾವುದೇ ಪರಿಣಾಮಗಳಿಲ್ಲದೇ ಹಾಗೇ ಉಳಿಯುತ್ತದೆ. ಈ ತತ್ವವನ್ನು ಈಗಾಗಲೆ ಮನ್ನಣೆ ಪಡೆದಿರುವಂಥದ್ದು ((1994) 1 ಎಸ್‌ಸಿಸಿ 92 – ಪ್ಯಾರಾಗ್ರಾಫ್ 44 ನೋಡಿ).

12. ಅಪೆಕ್ಸ್ ನ್ಯಾಯಾಲಯವು ***ಎಂ. ನಾಗಭೂಷಣ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಮೇಲಿನ),*** ಪ್ರಕರಣದಲ್ಲಿ ಕೆಐಎಡಿ ಅಧಿನಿಯಮ ಒಂದು ಸ್ವಯಂ ಅಡಕಗೊಳ್ಳುವ ಸಂಹಿತೆಯಾಗಿದೆ, ಆದುದರಿಂದ ಕೆಐಎಡಿ ಅಧಿನಿಯಮದ ಅಡಿಯಲ್ಲಿನ ಸ್ವಾಧೀನತೆಯೂ ಕೇಂದ್ರ ಅಧಿನಿಯಮವಾದ ಭೂಸ್ವಾಧೀನತೆ ಅಧಿನಿಯಮವನ್ನು 1984 ರ ಅಧಿನಿಯಮ ಸಂಖ್ಯೆ 68 ರಲ್ಲಿ ತಿದ್ದುಪಡಿಯಾಗಿರುವ 11ಎ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವುದರಿಂದಾಗಿ ಅಂತ್ಯಗೊಳ್ಳುವುದಿಲ್ಲ. ಯುಕ್ತವಾಗಿ ನಿಲ್ಲುವುದಿಲ್ಲ ಕೆಐಎಡಿ ಅಧಿನಿಯಮವನ್ನು ರಾಜ್ಯದಲ್ಲಿ ಸೂಕ್ತ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅಭಿವೃದ್ಧಿಗೊಳಿಸುವ ಉದ್ದೇಶವನ್ನು ಸಾಧಿಸುವುದಕ್ಕೆ ಮತ್ತು ಈ ಸಂಬಂಧದಲ್ಲಿ ಕೈಗಾರಿಕಾಭಿವೃದ್ಧಿ ಮಂಡಳಿ ಎಂದು ತಿಳಿದಿರುವ ಮಂಡಳಿಯು ಅಂಥ ಪ್ರದೇಶಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅಭಿವೃದ್ಧಿಗೊಳಿಸುವುದಕ್ಕೆ ಮತ್ತು ಅವುಗಳನ್ನು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದಲೇ ಈ ಕೆಐಎಡಿ ಅಧಿನಿಯಮವನ್ನು ಅಧಿನಿಯಮಿಸಲಾಗಿದೆ. ಆದುದರಿಂದಲೇ ಕೆಐಎಡಿ ಅಧಿನಿಯಮವು ಸ್ವಯಂ ಅಡಕಗೊಳ್ಳುವ ಸಂಹಿತೆಯಾಗಿದೆ. ಅದಕ್ಕೆ ಕೇಂದ್ರ ಅಧಿನಿಯಮವು ಪೂರಕವಾಗುವುದಿಲ್ಲ ಮತ್ತು ಕೆಐಎಡಿ ಅಧಿನಿಯಮದ ಅಡಿಯಲ್ಲಿನ ಪ್ರಕ್ರಿಯೆಗಳು 11ಎ ಪ್ರಕರಣದ ಕಾರ್ಯನಿರ್ವಹಣೆಯಿಂದ ರದ್ದಾಗುವುದಿಲ್ಲ.

13. ***ಗಿರ್‌ನಾರ್ ಟ್ರೇಡರ್ಸ್ (3) –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇತರರು (ಮೇಲಿನ)*** ಪ್ರಕರಣದಲ್ಲಿ ಅಪೆಕ್ಸ್ ನ್ಯಾಯಾಲಯದ ಸಂವಿಧಾನ ಪೀಠ ಭೂಸ್ವಾಧೀನತೆ ಅಧಿನಿಯಮ, 1894, 1984 ರ ಅಧಿನಿಯಮ ಸಂಖ್ಯೆ 68 ರಲ್ಲಿ ತಿದ್ದುಪಡಿಯನ್ನು ಒಳಗೊಂಡಂತೆ 11ಎ ಪ್ರಕರಣವು ಮಹಾರಾಷ್ಟ್ರ ಪ್ರಾದೇಶಿಕ ಮತ್ತು ಪಟ್ಟಣ ಯೋಜನಾ ಅಧಿನಿಯಮ, 1966 ಕ್ಕೆ ಅನ್ವಯವಾಗುವುದಿಲ್ಲ. ನಿಯಮಿಸಿದ ಸ್ವಾಧೀನತೆಯ ಕಾಲಮಿತಿಗೆ ಸಂಬಂಧಿಸಿದಂತೆ ನಂತರ ಅಧಿನಿಯಮವು ಸ್ವಯಂ ಅಡಕಗೊಳ್ಳುವ ಅಧಿನಿಯಮವಾಗಿದೆ ಮತ್ತು ಸ್ವಾಧೀನತಾ ಪ್ರಕ್ರಿಯೆಗಳು ರದ್ದಾಗುವುದು ಒಳಗೊಂಡಂತೆ ಅದರ ಪರಿಣಾಮವು ತಪ್ಪುತ್ತದೆ. ಅಪೆಕ್ಸ್ ನ್ಯಾಯಾಲಯ ಸದರಿ ನಿರ್ಣಯದಲ್ಲಿ ಯೋಜನಾ ಅಭಿವೃದ್ಧಿಯ ಪ್ರಧಾನ ಉದ್ದೇಶದೊಂದಿಗೆ ಸ್ವಯಂ ಅಡಕಗೊಳ್ಳುವ ಸಂಹಿತೆ ಮತ್ತು ಸದರಿ ಪ್ರಧಾನ ಉದ್ದೇಶವನ್ನು ಸಾಧಿಸುವುದಕ್ಕೆ ರಚಿಸಬೇಕಾದ ಆ ಯಾವುದೇ ಇತರ ವಿಷಯಗಳೂ ಎಂಆರ್‌ಟಿಪಿ ಅಧಿನಿಯಮ, 1966 ಒಳಗೊಂಡಿದೆ. ಈ ಸಂದರ್ಭದಲ್ಲಿ, ಅದು ಎಂಆರ್‌ಟಿಪಿ ಅಧಿನಿಯಮದಲ್ಲಿ ಭೂಸ್ವಾಧೀನತೆ ಅಧಿನಿಯಮ, 1894ರ ಕೆಲವು ಉಪಬಂಧಗಳನ್ನು ಪರಿಮಿತ ಉದ್ದೇಶಕ್ಕಾಗಿ ಮಾತ್ರವೇ ಭೂಸ್ವಾಧೀನತೆಯನ್ನು ಸೇರಿಸಿರುತ್ತದೆ. ಆದುದರಿಂದ, ಕೇಂದ್ರ ಅಧಿನಿಯಮಯದ ಉಪಬಂಧಗಳನ್ನು ಎಂಆರ್‌ಟಿಪಿ ಅಧಿನಿಯಮ ಧ್ಯೇಯ ಮತ್ತು ಉದ್ದೇಶವನ್ನು ತಡೆಯುವುದನ್ನು ಅಥವಾ ಅಡ್ಡಿಪಡಿಸುವುದಕ್ಕೆ ಬಳಕೆಮಾಡಬಾರದು ಮತ್ತು ಈ ಕಾರಣದಿಂದ ಭೂಸ್ವಾಧೀನತೆ ಅಧಿನಿಯಮದ 11ಎ ಪ್ರಕರಣವನ್ನು ಎಂಆರ್‌ಟಿಪಿ ಅಧಿನಿಯಮ, 1966 ರ ಉಪಬಂಧಗಳೊಂದಿಗೆ ಓದಿಕೊಳ್ಳಬಾರದು.

14. ***ಸ್ವರ್ಣಲತ –ವಿರುದ್ಧ– ಹರಿಯಾಣ ರಾಜ್ಯ*** [13] ಪ್ರಕರಣದಲ್ಲಿನ ತೀರ್ಪಿನ ಪ್ರಕಾರ, ಅಪೆಕ್ಸ್ ನ್ಯಾಯಾಲಯವು, ಒಬ್ಬ ವ್ಯಕ್ತಿಯು ಪ್ರಾರಂಭಿಕ ಅಧಿಸೂಚನೆಯನ್ನು ಆಕ್ಷೇಪಿಸಿರುವಾಗ, ಅದನ್ನು ಅವನು ಯುಕ್ತವಾದ ಅವಧಿಯೊಳಗೆ ಮಾಡಿರುವಾಗ ಮತ್ತು ವಿಳಂಬಿತ ಹಂತದಲ್ಲಿ ಸ್ವಾಧೀನತೆಯನ್ನು ಆಕ್ಷೇಪಿಸಿದ್ದರೆ, ಸದರಿ ಕಾರಣಗಳ

13. (2010) 4 ಎಸ್‌ಸಿಸಿ 532

ಮೇಲೆ ಮಾತ್ರವೇ ಅರ್ಜಿಯನ್ನು ವಜಾ ಮಾಡಲು ಅರ್ಹವಾದುದಾಗಿದೆ ಎಂದು ಅಭಿಪ್ರಾಯಪಟ್ಟಿದೆ.

15. ಆದುದರಿಂದ, ಇದು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮವು ಸ್ವಯಂ ಸಂಪೂರ್ಣ ಸಂಹಿತೆಯಾಗಿರುವುದು ಮತ್ತು ಕೇಂದ್ರ ಅಧಿನಿಯಮವು 1894 ರ 1 ರಲ್ಲಿನ ಭೂಸ್ವಾಧೀನತೆ ಅಧಿನಿಯಮದ ಉಪಬಂಧಗಳನ್ನು ಜಿಲ್ಲಾಧಿಕಾರಿಗಳು ವಿಚಾರಣೆ ಮತ್ತು ತೀರ್ಪು ನೀಡುವ ಸಂಬಂಧದಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸಿಕೊಳ್ಳಬೇಕಿರುವುದು ಸ್ಪಷ್ಟವಾಗುತ್ತದೆ, ಸಿವಿಲ್ ನ್ಯಾಯಾಲಯಕ್ಕೆ ಸ್ವಾಧೀನ ಭೂಮಿಯ ಸಂಬಂಧದಲ್ಲಿನ ಪರಿಹಾರದ ವಿನಿಯೋಗ ಮತ್ತು ಪರಿಹಾರದ ಸಂದಾಯದ ಉಲ್ಲೇಖ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ 30ನೇ ಪ್ರಕರಣದಿಂದ ಸ್ಪಷ್ಟವಾಗುತ್ತವೆ. ಅದು ಈ ಮುಂದಿನಂತಿದೆ:–

**30. ಕೇಂದ್ರ ಅಧಿನಿಯಮ 1894 ರ 1 ಅನ್ವಯ,–**

> ಭೂಸ್ವಾಧೀನತೆ ಅಧಿನಿಯಮ, 1894 (1894 ರ ಕೇಂದ್ರ ಅಧಿನಿಯಮ 1) ರ ಉಪಬಂಧಗಳನ್ನು ಜಿಲ್ಲಾಧಿಕಾರಿಗಳು ವಿಚಾರಣೆ ಮತ್ತು ತೀರ್ಪು ನೀಡುವ ಸಂಬಂಧದಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು, ನ್ಯಾಯಾಲಯ ಈ ಅಧ್ಯಾಯದ ಅಡಿಯಲ್ಲಿ ಜಮೀನುಗಳ ಸ್ವಾಧೀನದ ಸಂಬಂಧದಲ್ಲಿನ ಪರಿಹಾರದ ವಿನಿಯೋಗ ಮತ್ತು ಪರಿಹಾರದ ಸಂದಾಯಕ್ಕೆ ಉಲ್ಲೇಖವನ್ನು ಯಥೋಚಿತ ವ್ಯತ್ಯಾಸದೊಂದಿಗೆ ಅನ್ವಯಿಸತಕ್ಕದ್ದು.

ತೀರ್ಪನ್ನು ಹೊರಡಿಸಲು ಮತ್ತು ಪರಿಹಾರದ ಸಂದಾಯಕ್ಕೆ ವಿಚಾರಣೆಗೆ ಸಂಬಂಧ ಪಟ್ಟಂತೆ ಭೂಸ್ವಾಧೀನತೆ ಅಧಿನಿಯಮ, 1894 ರ ಉಪಬಂಧಗಳನ್ನು 30ನೇ

ಪ್ರಕರಣದಲ್ಲಿ ಸೇರಿಸಿದ್ದಾಗ್ಯೂ ಮತ್ತು ಭೂಸ್ವಾಧೀನತೆ ಅಧಿನಿಯಮಕ್ಕೆ ನಂತರದ ತಿದ್ದುಪಡಿಗಳನ್ನು ಸೇರಿಸುವ ಮೂಲಕ ಶಾಸನವಾಗುವಂತೆ ಪ್ರವರ್ಗೀಕರಿಸ ಬೇಕಾಗಿರುವುದರಿಂದ ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರದ ಸಂದಾಯಕ್ಕೆ ಸಂಬಂಧಿಸಿದಂತೆ ಅದನ್ನು ಅಕ್ಷರ ಮಟ್ಟಿಗೆ ಅನ್ವಯವಾಗುವುದಿಲ್ಲ ಎಂದು ಹೇಳಬಾರದು. ವಾಸ್ತವವಾಗಿ, ಅಪೆಕ್ಸ್ ನ್ಯಾಯಾಲಯ ಭೂಸ್ವಾಧಿನತೆಯ (ತಿದ್ದುಪಡಿ) ಅಧಿನಿಯಮವು, 1984 ರ ಅಧಿನಿಯಮದ 68 ರ ಮೂಲಕ ಪರಿಚಯಿಸಲಾದ 11ಎ ಪ್ರಕರಣವನ್ನು ಪರಿಣಾಮದೊಂದಿಗೆ ವ್ಯವಹರಿಸುವ ತೀರ್ಪಾಗಿರುವ. ***ಎಂ. ನಾಗಭೂಷಣ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಮೇಲಿನ)*** ಮತ್ತು ***ಆಫ್‌ಶೋರ್ ಹೊಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರರು (ಮೇಲಿನ)*** ಇದರಲ್ಲಿ ಭೂಮಿಯನ್ನು ಕಳೆದುಕೊಂಡವರಿಗೆ ಪರಿಹಾರವನ್ನು ನಿರ್ಧರಿಸುವುದಕ್ಕಾಗಿ ಮತ್ತು ಸಂದಾಯ ಮಾಡುವುದಕ್ಕಾಗಿ ಹೇಳಬಾರದು, ಭೂಸ್ವಾಧೀನತೆಯ ಅಧಿನಿಯಮದ 23(1)(ಎ) ಪ್ರಕರಣದಂತೆ ಮತ್ತು 23(2) ಪ್ರಕರಣದಂತೆ ಅಥವಾ 28ನೇ ಪ್ರಕರಣದ ವಿಷಯಕ್ಕೊಳಪಡುವುದಕ್ಕಾಗಿ ಉಪಬಂಧಗಳಿಗೆ ಮಾಡಿದ ತಿದ್ದುಪಡಿಗಳೂ ಅದಕ್ಕೆ ಅನ್ವಯವಾಗುವುದಿಲ್ಲವೆಂದು ಹೇಳಿರುವುದಿಲ್ಲ. ಇದು ವಾದಾಂಶವಾಗಿರುವುದರಿಂದ ಭೂಸ್ವಾಧೀನತೆ ಅಧಿನಿಯಮಕ್ಕೆ ತರುವಾಯದ ತಿದ್ದುಪಡಿಗಳನ್ನು ಸೇರಿಸುವುದರಿಂದ ಅದು ಅನ್ವಯುವಾಗುವುದಿಲ್ಲ ನಿರುಪಾಧಿಕ ಪ್ರಸ್ತಾವನೆಗಳು ಎಂಬಂತೆ ತೆಗೆದುಕೊಳ್ಳಬಾರದು.

16. ***ನಾಗಪುರ ಮೇಲ್ಪಾಟು ಟ್ರಸ್ಟ್ –ವಿರುದ್ಧ– ವಿಠಲ ರಾವ್ ಮತ್ತು ಇತರರು (ಮೇಲಿನ)*** ಈ ಪ್ರಕರಣದಲ್ಲಿ ಅಪೆಕ್ಸ್ ನ್ಯಾಯಾಲಯದ ಸನ್ಮಾನ್ಯ ಏಳು ಜನ ನ್ಯಾಯಾಧೀಶರನ್ನು ಒಳಗೊಂಡ ಸಂವಿಧಾನ ಪೀಠವು ಪರಿಹಾರದ ವಿವಿಧ ತತ್ವಗಳ ಪ್ರಶ್ನೆಯನ್ನು ವ್ಯವಹರಿಸುವಾಗ, ಭೂಮಿಯನ್ನು, ಯಾವುದೇ ಮೇಲ್ಪಾಟು ಟ್ರಸ್ಟ್ ಅಥವಾ ನಗರಸಭೆ ಅಥವಾ ಸರ್ಕಾರದಿಂದಲೇ ಆರ್ಜಿಸಿದ್ದಲ್ಲಿ, ಮಾಲೀಕನಿಗೆ ಸಂಬಂಧಪಡುವಷ್ಟರಮಟ್ಟಿಗೆ ಭೂಮಿಯನ್ನು ಒಂದೇ ಪ್ರಾಧಿಕಾರ ಅಥವಾ ಬೇರೆ ಬೇರೆ ಪ್ರಾಧಿಕಾರಿಗಳು ಸ್ವಾಧೀನಪಡಿಸಿಕೊಂಡಿವೆಯೇ ಎಂಬುದು ಪ್ರಶ್ನೆಯಾಗುವುದಿಲ್ಲ

ಎಂದು ಅಭಿಪ್ರಾಯಪಟ್ಟಿದೆ. ಅಪೆಕ್ಸ್ ನ್ಯಾಯಾಲಯವು, ಸರ್ಕಾರವು ವಸತಿ ಸ್ಥಳಾವಕಾಶವನ್ನು ಕಲ್ಪಿಸುವುದಕ್ಕಾಗಿ ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಾಗಲೀ ಅಥವಾ ನಗರ ಮೇಲ್ಪಾಟು ಅಧಿನಿಯಮದ ಅಡಿಯಲ್ಲಾಗಲೀ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದಲ್ಲಿ; ರಾಜ್ಯವು ಯುಕ್ತ ನಿಶ್ಚಿತ ಸ್ಥಿತಿಯನ್ನು ತರುವ ಸಲುವಾಗಿ ಶಾಸನದ ಉದ್ದೇಶಕ್ಕಾಗಿ ವ್ಯತ್ಯಾಸನಾತ್ಮಕ ತಿಳಿವಳಿಕೆಯ ಮೇಲೆ ದೀರ್ಘಕಾಲಿಕ ಸ್ವಾಧೀನತೆಯಾಗಿ ಕಂಡುಬಂದಿರುವುದನ್ನು ಯುಕ್ತವಾಗಿ ವರ್ಗೀಕರಣ ಮಾಡುವುದು ಮತ್ತು ವ್ಯತ್ಯಾಸಾತ್ಮಕ ಸಂಬಂಧದೊಂದಿಗೆ ವಿವೇಚಾನಾಯುಕ್ತವಾಗಿ ಉದ್ದೇಶವನ್ನು ಪ್ರಶ್ನಿತ ಶಾಸನದ ಮೂಲಕ ಸಾಧಿಸಬೇಕಾದದನ್ನು ಕೋರುತ್ತದೆಯೆಂದು ಎತ್ತಿಹೇಳಿದೆ. ಈ ಉದ್ದೇಶವನ್ನು ಮನಗೊಂಡ ಸ್ವತಃ ಅದು ಕಾನೂನು ಸಮ್ಮತಗೊಳಿಸತಕ್ಕದ್ದು ಮತ್ತು ಉದ್ದೇಶವು ತಾರತಮ್ಯತೆ ಹೊಂದಿರಬಾರದು ಹಾಗೂ ಈ ಉದ್ದೇಶವು ಅಲ್ಪ ಸಂಖ್ಯೆಯ ಒಂದು ವರ್ಗದ ವಿರುದ್ಧ ತಾರತಮ್ಯತೆ ಎಸಗುವುದಿದ್ದರೆ ಅದನ್ನು ಯುಕ್ತವಾದ ವರ್ಗೀಕರಣ ಆಧಾರದ ಮೇಲೆ ತಾರತಮ್ಯತೆಯನ್ನು ಸಮರ್ಥಿಸಬಾರದು ಎಂದು ಅಪೆಕ್ಸ್ ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ. ಅಪೆಕ್ಸ್ ನ್ಯಾಯಾಲಯ ಪ್ಯಾರಾ ಸಂಖ್ಯೆ 27 ರಲ್ಲಿ ಎತ್ತಿರುವ ಪ್ರಶ್ನೆಯೂ ಈ ಕೆಳಗಿನಂತಿದೆ:–

> 27. ಶಾಸನದ ಉದ್ದೇಶವು ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಕಡ್ಡಾಯವಾಗಿ ಸ್ವಾಧೀನ ಪಡಿಸಿಕೊಳ್ಳುವುದಿದ್ದರೆ ಪರಿಹಾರವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸುಸಂಗತ ವರ್ಗೀಕರಣ ಯಾವುದು?

ಅಪೆಕ್ಸ್ ನ್ಯಾಯಾಲಯ ಎತ್ತಿದ ಪ್ರಶ್ನೆಗೆ ಮುಂದುವರೆದು ಪ್ಯಾರಾ ಸಂ. 28 ರಿಂದ 31 ರಲ್ಲಿ ಉತ್ತರವನ್ನು ನೀಡಿದೆ ಅದು ಈ ಕೆಳಗಿನಂತಿದೆ:–

> 28. ಭೂಸ್ವಾಧೀನತೆಗಾಗಿ ಭೂಮಿಯ ಮಾಲೀಕನು ಹಿರಿಯ ಅಥವಾ ಕಿರಿಯ, ಆರೋಗ್ಯವಂತ ಅಥವಾ ಅನಾರೋಗ್ಯವಂತ, ಉದ್ದ ಅಥವಾ ಕುಳ್ಳನೆಂದಾಗಲೀ

ಅಥವಾ ಸ್ವತ್ತು ಮಾಲೀಕನ ಪಿತ್ರಾರ್ಜಿತವೆಂದಾಗಲೀ ಅಥವಾ ಅವನ ಸ್ವಯಾರ್ಜಿತವೆಂದಾಗಲೀ ಅಥವಾ ಮಾಲೀಕ ರಾಜಕಾರಣಿಯಾಗಿರುವ ಅಥವಾ ವಕೀಲನಾಗಿರುವ ಕಾರಣ ಮೇಲೆ ಪರಿಹಾರದ ವಿವಿಧ ತತ್ವಗಳನ್ನು ರಚಿಸಿರುವುದಿಲ್ಲವೆಂಬುದು ವಿವಾದಿತವಲ್ಲ. ಈ ವರ್ಗೀಕರಣದ ವಿಂಗಡಣೆಯು ಸಮರ್ಥವಾದುದಲ್ಲ ಯಾಕೆ? ಏಕೆಂದರೆ, ಸಾರ್ವಜನಿಕ ಉದ್ದೇಶಕ್ಕಾಗಿ ಕಡ್ಡಾಯವಾಗಿ ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶದ ಸಲುವಾಗಿ ಭೂಮಿಯು ಒಂದು ವಿಧದ ಮಾಲೀಕತ್ವಕ್ಕೆ ಅಥವಾ ಮತ್ತೊಂದು ವಿಧದ ಮಾಲೀಕತ್ವಕ್ಕೆ ಸೇರಿದ್ದಾಗಲೀ ಉದ್ದೇಶವನ್ನು ಸಮಾನವಾಗಿ ಪರಿಗಣಿಸುವುದು ಇಲ್ಲಿನ ಗುರಿಯಾಗಿದೆ.

29. ಪರಿಹಾರದ ಉದ್ದೇಶಕ್ಕಾಗಿ ಯಾವ ಭೂಮಿ ಸ್ವಾಧೀನತೆಗಾಗಿ, ಸಾರ್ವಜನಿಕ ಉದ್ದೇಶದ ಆಧಾರದ ಮೇಲೆ ವರ್ಗೀಕರಣವನ್ನು ಮಾಡಲಾಗಿದೆಯೇ? ಇತರೆ ಹೇಳುವುದಾದರೆ, ಆಸ್ಪತ್ರೆ ಅಥವಾ ಶಾಲೆ ಅಥವಾ ಸರ್ಕಾರಿ ಕಟ್ಟಡಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗಾಗಿ ಶಾಸನವು ಪರಿಹಾರದ ಬೇರೆ ಬೇರೆ ತತ್ವಗಳನ್ನು ಹೇಳಿದೆಯೇ? ಶಾಸನವು ಆಸ್ಪತ್ರೆಗಾಗಿ ಸ್ವಾಧೀನ ಪಡಿಸಿಕೊಳ್ಳವ ಭೂಮಿಯನ್ನು ಮಾರುಕಟ್ಟೆ ಮೌಲ್ಯದ ಶೇ. 50 ರಷ್ಟೆಂದು, ಶಾಲೆಗಾಗಿ ಶೇ 60 ರಷ್ಟೆಂದು ಸರ್ಕಾರಿ ಕಟ್ಟಡಗಳಿಗಾಗಿ ಶೇ. 70 ರಷ್ಟಿರ ಮೌಲ್ಯವೆಂದು ಹೇಳಿದೆಯೇ? ಎಲ್ಲಾ ಮೂರು ಉದ್ದೇಶಗಳು ಸಾರ್ವಜನಿಕ ಉದ್ದೇಶಕ್ಕಾಗಿಯೇ ಆಗಿವೆ ಮತ್ತು ಮಾಲೀಕರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವನಿಗೆ ಅದು ಒಂದು ಸಾರ್ವಜನಿಕ ಉದ್ದೇಶವೆಂದಗಾಲೀ ಅಥವಾ ಇತರ ಉದ್ದೇಶವೆಂಬುದು ಮುಖ್ಯವಾದ ವಿಷಯುವಾಗುವುದಿಲ್ಲ. ಭಾರತ ಸಂವಿಧಾನದ 14ನೇ

ಅನುಚ್ಛೇದವು ವೈಯಕ್ತಿಕ ಹಕ್ಕನ್ನು ಪ್ರದತ್ತಗೊಳಿಸಿದೆ ಮತ್ತು ಈ ವೈಯಕ್ತಿಕ ಹಕ್ಕುಗಳಿಗೆ ವಿವಿಧ ನಿರೂಪಣೆಯ ಆ ಯಾವುದೇ ಕೆಲವು ಸಮರ್ಥನೆಗಳಲ್ಲಿರುವುದು ವರ್ಗೀಕರಣವನ್ನು ವ್ಯವಸ್ಥಿತವಾಗಿ ಸಮರ್ಥಿಸಬೇಕಾಗುತ್ತದೆ. ಸಾಮಾನ್ಯವಾಗಿ ನಮಗೆ ಪರಿಹಾರ ನಿರ್ಣಯದ ಉದ್ದೇಶಕ್ಕಾಗಿ 14ನೇ ಅನುಚ್ಛೇಧದ ಅಡಿಯಲ್ಲಿ ಸಾರ್ವಜನಿಕ ಉದ್ದೇಶದ ಆಧಾರದ ಮೇಲೆ ಮಾಡಿದ ವರ್ಗೀಕರಣವು ಅಂಗೀಕಾರವಾದುದ್ದಲ್ಲ. ಸ್ವತಃ ಭೂಮಿಯ ಮಾಲೀಕನು ಮೇಲ್ಪಾಟು ಯೋಜನೆಯಿಂದ ಫಲಾನುಭವಗಳನ್ನು ಸ್ವೀಕರಿಸುವಂತಹ ವಿಭಿನ್ನ ಸ್ಥಿತಿಯಲ್ಲಿ ಅವನಿದ್ದಾಗ ಮತ್ತು ಅವನಿಗೆ ಪರಿಹಾರವನ್ನು ನಿಗದಿ ಪಡಿಸುವಾಗ ಅವನು ಫಲಾನುಭವವನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಪ್ರಾಧಿಕಾರ ಅಥವಾ ಮೇಲ್ಪಾಟು ಟ್ರಸ್ಟ್ ಅಥವಾ ಮುನ್ಸಿಪಲ್ ಕಾರ್ಪೋರೇಷನ್ ಸ್ವಾಧೀನ ಪಡಿಸಿಕೊಳ್ಳುವ ಭೂಮಿಯ ಸಂಬಂಧ ಪಟ್ಟ ಮಾಲೀಕನಿಗೆ ಅದು ಒಂದು ಪ್ರಾಧಿಕಾರ ಅಥವಾ ಮತ್ತೊಂದು ಆಧಾರದ ಮೇಲೆ ವರ್ಗೀಕರಣ ಮಾಡಬೇಕಾಗಿದೆ ಎಂಬುವುದು ಅವನಿಗೆ ಮುಖ್ಯವಾದ ವಿಷಯವಾಗಿರುವುದಿಲ್ಲ.

30. ಭೂಸ್ವಾಧೀನತೆಯನ್ನು ಯಾವ ಒಂದು ಸ್ವಾಧೀನತೆ ಅಧಿನಿಯಮ ಅಥವಾ ಮತ್ತೊಂದು ಸ್ವಾಧೀನತೆಯ ಅಧಿನಿಯಮದ ಅಡಿಯಲ್ಲಿನ ಸ್ವಾಧೀನತೆಯನ್ನು ಮಾಡಲಾಗಿದೆಯೆಂಬುದು ಇಲ್ಲಿ ಅಪ್ರಸ್ತುತವಾದುದಾಗಿದೆ. ಎರಡು ಅಧಿನಿಯಮಗಳು ಅಸ್ತಿತ್ವದಲ್ಲಿದ್ದರೆ ರಾಜ್ಯವು ಸಮಾನ ಸ್ಥಿತಿಯಲ್ಲಿರುವ ಒಬ್ಬ ಮಾಲೀಕನಿಂದ ಇನ್ನೊಬ್ಬ ಮಾಲೀಕನಿಗೆ ವ್ಯತ್ಯಾಸವಾಗುವಂತಹ ಪರಿಹಾರ ನೀಡಲು ಸಾಧ್ಯವಾಗುವುದರಿಂದ ಈ ತಾರತಮ್ಯತೆಯ ವಿರುದ್ಧ ಮಾಲೀಕನು 14ನೇ ಅನುಚ್ಛೇದ ಸಂರಕ್ಷಣೆಯನ್ನು ಕ್ಲೇಮು ಮಾಡಬಹುದಾಗಿದೆ.

31. ಇದು ಕೊಳಗೇರಿಗಳನ್ನು ನಿರ್ಮೂಲನೆ ಮಾಡಲು ಸಾಧ್ಯವಾಗದಿರುವುದು ವಿವಿಧ ಇತರ ಶ್ಲಾಘನೀಯ ವಿಚಾರಗಳನ್ನು ಮಾಡಲು ರಾಜ್ಯವು ವಿಫಲವಾಗಿದೆಯೆಂಬ ನಿಜ ಸ್ಥಿತಿಯನ್ನು ಇದು ತಿಳಿಸುತ್ತದೆ. ಈ ವಾದವನ್ನು ಅಂಗೀಕರಿಸಿದಲ್ಲಿ 14ನೇ ಅನುಚ್ಛೇದವು ನೀಡಿದ ಸಂರಕ್ಷಣೆಯನ್ನು ಒಟ್ಟಾರೆ ನಾಶ ಮಾಡಿದಂತೆ. ರಾಜ್ಯವು ಆಸ್ಪತ್ರೆಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗಾಗಿ ಒಂದು ಕಾನೂನು, ಶಾಲೆಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗಾಗಿ ಒಂದು ಕಾನೂನು, ಕೊಳಗೇರಿಗಳ ನಿರ್ಮೂಲನೆಗಾಗಿ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗಾಗಿ ಒಂದು ಕಾನೂನು, ಸರ್ಕಾರಿ ಕಟ್ಟಡಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗಾಗಿ ಮತ್ತೊಂದು ಕಾನೂನು ನವದೆಹಲಿಯಲ್ಲಿ ಸ್ವಾಧೀನಕ್ಕಾಗಿ ಒಂದು ಕಾನೂನು ಮತ್ತು ಹಳೆದೆಹಲಿಗೊಂದು ಕಾನೂನು ಮಾಡುವುದರ ಬದಲು ಒಂದೇ ಕಾನೂನು ಇರುವಂತೆ ರಾಜ್ಯವನ್ನು ಬಲಗೊಳಿಸಬೇಕು. ಇದು ಹಲವು ಪ್ರಕರಣಗಳಲ್ಲಿ ಸಾಮಾನ್ಯವಾಗಿ ನಗರದಲ್ಲಿ ಆಗಿರುವ ಅಭಿವೃದ್ಧಿಯಿಂದಾಗಿಯೇ ಮಾಲೀಕನ ಯಾವುದೇ ಪ್ರಯತ್ನವಿಲ್ಲದೆ ನಗರದಲ್ಲಿರುವ ಭೂಮಿಯ ಮೌಲ್ಯವು ಏರಿಕೆಯಾಗಿರುವುದನ್ನು ತಿಳಿಸುತ್ತವೆ. ನಗರಾಭಿವೃದ್ಧಿಯಿಂದಲೇ ಭೂಮಿಯ ಮೌಲ್ಯ ಏರಿಕೆಯಾಗಿರುವುದು ನಿಸ್ಸಂಶಯವಾಗಿದೆ. ಆದರೆ 14 ನೇ ಅನುಚ್ಛೇದವು ಒಬ್ಬ ಮಾಲೀಕನು ತನ್ನ ನೆರೆಹೊರೆಯವರ ಗಮನಕ್ಕೆ ತರದೆ ತನ್ನ ಗಳಿಸದ ಸಂವೃದ್ಧಿಯ ಸ್ವತ್ತು ಹಕ್ಕಿನ ಹರಣವನ್ನು ಮಾಡುವುದುನ್ನು ಅದು ನಿಷೇಧಿಸುತ್ತವೆ. ನೆರೆಹೊರೆಯವರು ತಮ್ಮ ಜಮೀನನ್ನು ಮತ್ತು ಬೆಳೆಯನ್ನು ಗಳಿಸದ ಸಂವೃದ್ಧಿ ಮಾರಾಟ ಮಾಡಬಹುದು. ರಾಜ್ಯದ್ಯಾಂತ ಗಳಿಸದ ಸಂವೃದ್ಧಿ ತೆರಿಗೆಗೆ ಶಾಸನದ ಉದ್ದೇಶವಾಗಿದ್ದರೆ ಅದನ್ನು ಹಾಗೇ ಮಾಡತಕ್ಕದ್ದು. ರಾಜ್ಯಕ್ಕೆ ಕೆಲವು

ಭೂಮಾಲೀಕರನ್ನು ಬಿಟ್ಟು ಕೆಲವೊಬ್ಬರ ಭೂಮಿಯನ್ನು ಕಡ್ಡಾಯವಾಗಿ ಸ್ವಾಧೀನಮಾಡುವ ಮಾಲೀಕ ತುಂಡು ತುಂಡು ಭೂಮಿಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಮೂಲಕ ಸ್ವಾಧೀನತೆಯ ಉದ್ದೇಶವನ್ನು ಸಾಧಿಸುವುದಕ್ಕೆ ಸಾಧ್ಯವಾಗಿರುವುದಿಲ್ಲ. ಕೊಳಗೇರಿ ನಿರ್ಮೂಲನೆ ಮಾಡುವ ಉದ್ದೇಶವು ಸ್ಪಷ್ಟವಾಗಿದ್ದರೆ ಸ್ವಾಧೀನಪಡಿಸಿಕೊಂಡ ಜಮೀನುಗಳ ಮಾಲೀಕರು ಅನ್ಯಥಾ ಈ ಯೋಜನೆಯ ಮೂಲಕ ನೇರವಾಗಿ ಪ್ರಯೋಜನಗಳನ್ನು ಪಡೆಯುವ ಮಾಲೀಕರು ವೆಚ್ಚದಲ್ಲಿ ಆಸ್ಪತ್ರೆ ಕಟ್ಟಡದ ಉದ್ದೇಶಕ್ಕಾಗಿ ಯಾವುದೇ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದರೆ ಅದರ ವೆಚ್ಚವನ್ನು ಜಮೀನಿನ ಮಾಲೀಕರು ಮಾಡತಕ್ಕದ್ದಲ್ಲ. ಆಸ್ಪತ್ರೆ, ಶಾಲೆ ಮುಂತಾದವುಗಳ ಕಟ್ಟಡದ ವೆಚ್ಚವು ಇಡೀ ಸಮುದಾಯವೇ ಭರಿಸತಕ್ಕದ್ದು.

17. ಮತ್ತೆ ಅಪೆಕ್ಸ್ ನ್ಯಾಯಾಲಯ ***ವೆಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ –ವಿರುದ್ಧ– ವಿಶೇಷ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕ್ರೊಬಾ ಮತ್ತು ಮತ್ತೊಬ್ಬರು (ಮೇಲಿನ),*** ಇದರಲ್ಲಿ ಅದು ಪ್ಯಾರಾ ಸಂಖ್ಯೆ 15 ರಲ್ಲಿ ಈ ಕೆಳಗಿನಂತೆ ಹೇಳಿದೆ:–

16. ಮೊದಲ ಶಾಸನವು ನಿರಸಿತವಾದದ್ದನ್ನು ಎರಡನೇ ಶಾಸನದಲ್ಲಿ ಉಲ್ಲೇಖಿಸಿ ಸೇರಿಸಲಾಗುತ್ತದೆ ಎರಡನೇ ಶಾಸನಕ್ಕೆ ಮೂರನೇ ಶಾಸನವು ಯಾವುದೇ ಪರಿಣಾಮಕಾರಿ ಯಾಗದಿರುವುದನ್ನು ಮೂಲ ಅಧಿನಿಯಮದಲ್ಲಿ ಸ್ಥೂಲವಾಗಿ ಸೇರಿಸಲಾಗಿರುತ್ತದೆ. (ಕ್ಲಾರ್ಕ್ ವಿರುದ್ಧ ಬ್ರಾಡ್‌ಲಾಫ್ ನೋಡಿ). ಅದರಂತೆಯೇ ತಾರ್ಕಿಕವಾಗಿ ಅಸ್ತಿತ್ವದಲ್ಲಿರುವ ಅಧಿನಿಯಮದಿಂದ ಕೆಲವು ಉಪಬಂಧಗಳನ್ನು ತರುವಾಯದ ಅಧಿನಿಯಮದಲ್ಲಿ ಆ ಯಾವುದೇ ಆನಂತರದ ಅಧಿನಿಯಮಕ್ಕೆ ಅನ್ವಯವಾಗುವುದನ್ನು ಅಭಿವ್ಯಕ್ತಿಸದಿದ್ದರೂ ಅದನ್ನು

ಸೇರಿಸಲಾಗಿದೆ ಎಂದೇ ಭಾವಿಸತಕ್ಕದೆಂದು ಅದನ್ನು (ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ–ಇನ್–ಕೌನ್ಸಿಲ್ –ವಿರುದ್ಧ– ಹಿಂದೂಸ್ತಾನ್ ಕೋ–ಆಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ ಲಿಮಿಟೆಡ್ ಪ್ರಕರಣವನ್ನು ನೋಡುವುದು) ಮೊಕದ್ದಮೆಯಲ್ಲಿ ಆನಂತರದ ಅಧಿನಿಯಮದಲ್ಲಿ ತಿದ್ದುಪಡಿಗಳನ್ನು ಮೂಲ ಅಧಿನಿಯಮಕ್ಕೆ ವಿನಿಮಯಿಸಲಾಗಿದೆಯೆಂದು ಭಾವಿಸುವುದು. **ಆದರೆ ಈ ನಿಯಮಗಳು ಪರಮೋಚ್ಚವಾದಲ್ಲಿ ಮತ್ತು ಬದಲಾಯಿಸದವುಗಳೇನಲ್ಲ**. ಮೊಕದ್ದಮೆಯ ಕೊನೆಯ ಉದಾಹರಣೆಯಲ್ಲ, ಪ್ರಿವಿ ಕೌನ್ಸಿಲ್ ಕಾನೂನಿನ ವಿವರಣೆಗಳನ್ನು ತನ್ನ ತತ್ವದಲ್ಲಿ ಹೇಳುವುದಕ್ಕೆ ಅರ್ಹವಾಗಿರುತ್ತದೆ. ಮೊದಲ ಕಾನೂನಿನ ತಿದ್ದುಪಡಿಯನ್ನು ನಂತರ ಅಧಿನಿಯಮಿತವಾದ ಅಧಿನಿಯಮದಲ್ಲಿ ಅದನ್ನು ಅನ್ವಯಿಸಿಕೊಳ್ಳುವುದಕ್ಕೆ ಅಭಿವ್ಯಕ್ತಿಸಿರದಿದ್ದರೆ ಎರಡನೇ ಅಧಿನಿಯಮದೊಳಗೆ ಅದನ್ನು ಅಧಿನಿಯಮಿಸಲಾಗಿದೆ ಎಂದು ಭಾವಿಸಬಾರದು (ಎಐ ಪುಟ 267ರಲ್ಲಿ) ಹೆಚ್ಚಿನದನ್ನು ಹೊರತುಪಡಿಸಿ ಪರಿಣಾಮಕಾರಿ ಕರ್ತವ್ಯಕ್ಕೆ ತರುವಾಯ ಅಧಿನಿಯಮಕ್ಕಾಗಿ ಅದು ಅವಶ್ಯಕವಾಗಿದ್ದರೆ ಮಾತ್ರವೇ ಅದನ್ನು ಅನ್ವಯಿಸಿಕೊಳ್ಳುವುದು. ಅಲ್ಲದೆ, ಈ ನ್ಯಾಯಾಲಯದ ಸಂವಿಧಾನ ಪೀಠವು, ಕಲೆಕ್ಟರ್ ಆಫ್ ಕಸ್ಟಮ್ಸ್, ಮದ್ರಾಸ್ –ವಿರುದ್ಧ– ನಾತೆಲ್ಲ ಸಂಪತ್ತು ಚೆಟ್ಟಿ ಮೊಕದ್ದಮೆಯಲ್ಲಿ ಪ್ರಿವಿ ಕೌನ್ಸಿಲ್ (ಎಸ್‌ಸಿಆರ್ ಪುಟ 837 ನೋಡಿ) ವಿಲೀನದ ಮೂಲಕ ಅನ್ವಯವಾಗುವ ಕ್ಷೇತ್ರದಲ್ಲಿ ಮತ್ತೊಂದು ಶಾಸನದ ಉಪಬಂಧವನ್ನು ಆ ಯಾವುದೇ ಪ್ರತಿಯೊಂದು ಮೊಕದ್ದಮೆಯೂ ಒಳಗಾಗುವಷ್ಟರ ಮಟ್ಟಿಗೆ ಅದು ವಿಸ್ತೃತವಾಗಿರುವುದಿಲ್ಲ ಎಂದು ನಿರ್ಣಯಿಸಿರುವುದನ್ನು ಸಂವಿಧಾನ ಪೀಠ ಎತ್ತಿ ಹಿಡಿದಿದೆ. ಅಂತಿಮವಾಗಿ, ಈ ನ್ಯಾಯಾಲಯ ಮಧ್ಯಪ್ರದೇಶ ಸರ್ಕಾರ –ವಿರುದ್ಧ– ಎಂ.ವಿ.

> ನರಸಿಂಹನ್ ಮೊಕದ್ದಮೆಯ ಸುಸಂಬದ್ಧ ನಿರ್ಣಯಗಳ ಪರಿಶೀಲನೆಯ ತರುವಾಯ, ತತ್ವದ ಘಟಕವನ್ನು ಹಿಂದಿನ ಅಧಿನಿಯಮದ ಉಪಬಂಧಗಳನ್ನು ತರುವಾಯುವಾದ ಅಧಿನಿಯಮದಲ್ಲಿ ವಿನಿಮಯಿಸಿದ್ದಲ್ಲ. ಅದು ತರುವಾಯದ ಅಧಿನಿಯಮದ ಭಾಗ ಸಮಗ್ರವಾಗಿ ಮತ್ತು ಸ್ವತಂತ್ರವಾಗಿ ಪಡೆದುಕೊಂಡ ಉಪಬಂಧಗಳಾಗುತ್ತವೆ ಮತ್ತು ಹಿಂದಿನ ಅಧಿನಿಯಮದಲ್ಲಿ ಯಾವುದೇ ನಿರಸಿತ ಅಥವಾ ತಿದ್ದುಪಡಿಗಳು ನಾಲ್ಕು ಸಂದರ್ಭಗಳಿಗೆ ಒಳಪಟ್ಟಾಗ ಪರಿಣಾಮಕಾರಿ ಯಾಗಿರುವುದಿಲ್ಲ, ಅದರಲ್ಲಿನ 'ತರುವಾಯದ ಅಧಿನಿಯಮ ಮತ್ತು ಹಿಂದಿನ ಅಧಿನಿಯಮಗಳು ಒಂದಕ್ಕೊಂದು ಪೂರಕವಾಗಿರುವಾಗ' ಮೊಕದ್ದಮೆಗಳಿಗೆ ಆ ಯಾವುದೇ ತತ್ವವನ್ನು ಅನ್ವಯಿಸಬಾರದು ಎಂಬುದು ಒಂದು ಸಂದರ್ಭವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

18. ಅಪೆಕ್ಸ್ ನ್ಯಾಯಾಲಯವು ***ಭೂಸ್ವಾಧೀನಾಧಿಕಾರಿ, ನಗರ ಮೇಲ್ಪಾಟು ನ್ಯಾಸ ಮಂಡಲಿ –ವಿರುದ್ಧ– ಎಚ್. ನಾರಾಯಣಯ್ಯ ಮತ್ತು ಇತರರು (ಮೇಲಿನ)*** ಮೊಕದ್ದಮೆಯಲ್ಲಿನ ತೀರ್ಪಿನಲ್ಲಿ ಕೆಲ ಅಸಂಭವನೀಯ ತತ್ವಗಳ ಮೇಲೆ ನಷ್ಟ ಪರಿಹಾರವನ್ನು ನಿರ್ಣಯಿಸುವ ಸಂಬಂಧದಲ್ಲಿ ತಿಳಿಸುವ ಉಪಬಂಧಿಸಿರದ ಸ್ವಾಧೀನ ಕಾರ್ಯವಿಧಾನವನ್ನು ತಿಳಿಸುವ ಪ್ಯಾರಾ 21 ಮತ್ತು 22 ಅನ್ನು ಪರಿಶೀಲಿಸಿದೆ; ಅಂಥ ಸನ್ನಿವೇಶದಲ್ಲಿ ಸ್ವತಃ ಸ್ವಾಧೀನತೆಯ ಸಿಂಧುತ್ವವನ್ನು ಆಕ್ಷೇಪಿಸ ಬಹುದಾಗಿದೆ. ಅಪೆಕ್ಸ್ ನ್ಯಾಯಾಲಯವು ಬೆಂಗಳೂರು ನಗರ ಮೇಲ್ಪಾಟು ಅಧಿನಿಯಮ, 1945 ಅಡಿಯಲ್ಲಿ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ದಿನಾಂಕಕ್ಕೆ ಸಂಬಂಧಿಸಿದ ಉಪಬಂಧಗಳನ್ನು ರಚಿಸುವಲ್ಲಿ ಭೂಸ್ವಾಧೀನತೆ ಅಧಿನಿಯಮ, 1894 ರ 23ನೇ ಪ್ರಕರಣವನ್ನು ಅನ್ವಯಿಸಿಕೊಳ್ಳಲು ತಿಳಿಸುತ್ತದೆ. ತೀರ್ಪಿನ 21 ಮತ್ತು 22 ನೇ ಪ್ಯಾರಾದಲ್ಲಿ ಹೇಳಲಾದ ಅಭಿಪ್ರಾಯೋಕ್ತಿಗಳನ್ನು ಉದ್ಧರಿಸಿದ ಭಾಗವು ಈ ಕೆಳಗಿನಂತಿದೆ.

21. ಅಧಿನಿಯುಮದಲ್ಲಿ ವಿವಿಧ ತತ್ವ ಅಥವಾ ಕಾರ್ಯವಿಧಾನ ನಿರ್ದಿಷ್ಟೇತರವಾಗಿರುತ್ತದೆ. ಬೆಂಗಳೂರು ಅಧಿನಿಯಮದ ಅಡಿಯಲ್ಲಿ ಪರಿಹಾರ ನಿರ್ಣಯುವನ್ನು ನಿರ್ವಹಿಸಲು, ಆದಷ್ಟು ಸೂಚಿಸಲು ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಸ್ವಾಧೀನತೆ ಅಧಿನಿಯಮದ 23(1)ನೇ ನಿಯಮವನ್ನು ಇಲ್ಲಿ ಅನ್ವಯಿಸಲು ಸಾಧ್ಯವಿಲ್ಲವೆಂದು ತಪ್ಪಾಗಿ ಪರಿಭಾಷಿಸಿರುತ್ತದೆ ಎಂಬುದು. ಬೆಂಗಳೂರು ಅಧಿನಿಯಮದ 27ನೇ ಪ್ರಕರಣದ ಸಾಮಾನ್ಯ ಉಪಬಂಧಗಳು ಅನ್ವಯಕ್ಕೆ ಒಳಪಡುತ್ತದೆ ಎಂಬುದು ಅದರ ಬಲವಾದ ವಾದಗಳಲ್ಲಿ ಒಂದಾಗಿದೆ. ಕೆಲ ಅಸಂಭವನೀಯ ತತ್ವಗಳ ಮೇಲೆ ಪರಿಹಾರವನ್ನು ನಿರ್ಣಯಿಸುವುದಕ್ಕಾಗಿ ಉಪಬಂಧಿಸಿರದ ಸ್ವಾಧೀನ ವ್ಯವಹರಣೆಗಳು ಮುಂದಾಲೋಚನೆ ಇಲ್ಲದವುಗಳಾಗಿವೆ. ಅಂಥ ಒಂದು ಸನ್ನಿವೇಶದಲ್ಲಿ ಸ್ವತಃ ಸ್ವಾಧೀನದ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ. ಆದರೆ, ನಾವು ಈಗಾಗಲೇ ಅಭಿಪ್ರಾಯಪಟ್ಟಿರುವಂತೆ ಇಲ್ಲಿ ಅಂಥ ಯಾವುದೇ ಪ್ರಶ್ನೆಯು ಕಂಡುಬಂದಿಲ್ಲ.

22. ಬೆಂಗಳೂರು ಅಧಿನಿಯಮದ 27ನೇ ಪ್ರಕರಣದಲ್ಲಿ ಬಳಸಿರುವ 'ಸಾಧ್ಯವಾದಷ್ಟು ಅವುಗಳನ್ನು ಅನ್ವಯಿಸಿಕೊಳ್ಳುವುದು' ಪದಗಳ ಅರ್ಥದ ಮೇಲೆ ಕೆಲವು ವಾದಗಳು ನಡೆದಿದೆ. ಈ ಪದಗಳನ್ನು ಸ್ವಾಧೀನತೆ ಅಧಿನಿಯಮದಲ್ಲಿನ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ 'ಸಾಧ್ಯವಾದಷ್ಟು ಅವುಗಳನ್ನು ನಿರ್ದಿಷ್ಟವಾಗಿ ನಮೂದಿಸಿರುವ' ಎಂಬ ಪದಗಳಾಗಿ ಬದಲಾಯಿಸಲು ಸಾಧ್ಯವಿಲ್ಲ. ಮತ್ತೊಂದು ದೃಷ್ಟಿಯಲ್ಲಿ, ನಿಸ್ಸಂದೇಹದ ಉದ್ದೇಶವಾಗಿ ಈ ಪದಗಳನ್ನು ಬಳಸಲಾಗಿದೆ. ಬೆಂಗಳೂರು ಅಧಿನಿಯಮದಲ್ಲಿ ವಿನಿಮಯಿಸಿದ

ಕಾರ್ಯವಿಧಾನ (ಉದಾ. 16ನೇ ಪ್ರಕರಣ) ಕ್ಕೆ ಸಂವಾದಿಯಾಗಿ ಸ್ವಾಧೀನತೆ ಅಧಿನಿಯಮದಲ್ಲಿ (ಉದಾ 4(1) ನೇ ಪ್ರಕರಣ) ಕಂಡುಬಂದ ಸ್ವಾಧೀನತೆ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಿಕೊಳ್ಳದೆ ಬಿಟ್ಟುಬಿಡುವುದು ಎಂಬ ಅರ್ಥದಲ್ಲಿ ಈ ಪದಗಳನ್ನು ಬಳಸಲಾಗಿದೆ. ಈ ಪದಗಳನ್ನು ಸ್ವಾಧೀನತೆ ಅಧಿನಿಯಮದ 23(1)ನೇ ಪ್ರಕರಣದ ಅಂಥ ಸಾಮಾನ್ಯ ಉಪಬಂಧಗಳನ್ನು ಸಾಧ್ಯವಾದಷ್ಟು ಯುಕ್ತವಾಗಿ ತರುವುದು ಅಥವಾ ಅನ್ವಯಿಸಿಕೊಳ್ಳುವುದು. ಸ್ವಾಧೀನತೆ ಅಧಿನಿಯಮದ ಯಾವುದೇ ಸಾಮಾನ್ಯ ಉಪಬಂಧಗಳನ್ನು ಹೊರತುಪಡಿಸಿ ಅದನ್ನು ಯುಕ್ತವಾಗಿ ರಚಿಸಲು ಸಾಧ್ಯವಾಗುವುದಿಲ್ಲ. ತತ್ವದಲ್ಲಿ ಅಭಿವ್ಯಕ್ತಿಸಿರದಿದ್ದಾಗ ಅಥವಾ ಅವಶ್ಯವಾಗಿ ಸೂಚ್ಯವಾಗಿ ಮಂಡಿಸಿದ್ದರೆ ಅದನ್ನ ಹೊರತುಪಡಿಸಿ ಅನ್ವಯಿಸಬೇಕಾಗುತ್ತದೆ ಎಂಬ ತತ್ವವನ್ನು ಹೇಳುವುದಕ್ಕೆ ಕಾರಣವಾಗುತ್ತವೆ. ಇದೆಲ್ಲವನ್ನು ತಪ್ಪಾಗಿ ಅರ್ಥೈಸಿರುವುದು, ನಮಗೆ ಒಂದಕ್ಕಿಂತ ಹೆಚ್ಚಿನ ಅರ್ಥ ವಿವರಣೆಯನ್ನು ಯುಕ್ತವಾಗಿ ಮುಕ್ತಗೊಳಿಸುವುದಕ್ಕೆ ಸಾಧ್ಯವಾಗದಿರುವುದು ಆಶ್ಚರ್ಯಕರವಾಗಿ ಕಂಡುಬರುತ್ತವೆ.

19. ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ನಿರ್ದಿಷ್ಟವಾಗಿ (ಹೊಸ ಭೂಸ್ವಾಧೀನತೆ ಅಧಿನಿಯಮ) 2013ರ 30 ಅಧಿನಿಯಮದ ಉಪಬಂಧಗಳು ಪರಿಣಾಮಕಾರಿತ್ವವನ್ನು, ಸದರಿ ಅಧಿನಿಯುಮದ 24ನೇ ಪ್ರಕರಣವನ್ನು ಪರಿಶೀಲಿಸಲಾಗಿದೆ, ಭೂಸ್ವಾಧೀನತೆ ಅಧಿನಿಯಮ 1894 ಉಪಬಂಧಗಳ ಅಡಿಯಲ್ಲಿ ಅಥವಾ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 ಉಪಬಂಧಗಳ ಅಡಿಯಲ್ಲಿ ಭೂಸ್ವಾಧಿನತೆಯ ನಿರ್ಣಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿರದ ವಸ್ತು ವಿಷಯಗಳು ಇಲ್ಲದಿರುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ನಷ್ಟ ಪರಿಹಾರದ ಸಂದಾಯದ ಉದ್ದೇಶಕ್ಕಾಗಿ ಸದರಿ ಉಪಬಂಧಗಳ ಪ್ರಕಾರದಂತೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರಕ್ಕೆ ಹೊಸ ಭೂಸ್ವಾಧೀನತೆ ಅಧಿನಿಯಮದ

ಉಪಬಂಧಗಳು ತಿದ್ದುಪಡಿಯಾಗಿದ್ದರೆ ಅದು ಅನ್ವಯವಾಗುತ್ತದೆ. ಪರಿಹಾರವನ್ನು ಸದರಿ ಉಪಬಂಧಗಳ ಅನುಸಾರ ಪಾವತಿಸಬೇಕಾಗುತ್ತದೆ. ಅನ್ಯಥಾ, ಅದು ಸಂವಿಧಾನದ 14ನೇ ಅನುಚ್ಛೇದದ ಅಡಿಯಲ್ಲಿ ಭೂಮಿಯನ್ನು ಕಳೆದುಕೊಂಡವನ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದ ಪರಿಣಾಮ ತಾರತಮ್ಯತೆಗೆ ಅವಕಾಶ ಮಾಡಿಕೊಡುತ್ತದೆ. ಈ ಹಂತದಲ್ಲಿ ಇದು ಉಪಯೋಗಕಾರಿಯಾಗಿರುವುದರಿಂದ ಇಲ್ಲಿ ಹೊಸ ಭೂಸ್ವಾಧೀನತೆ ಅಧಿನಿಯಮದ 24ನೇ ಪ್ರಕರಣವನ್ನು ಉಲ್ಲೇಖಿಸಲಾಗಿದೆ ಅದು ಈ ಮುಂದಿನಂತಿದೆ.

> 24. **1894ರ ಅಧಿನಿಯಮ ಸಂಖ್ಯೆ 1ರ ಮೇರೆಗಿನ ಭೂ ಸ್ವಾಧೀನ ಪ್ರಕ್ರಿಯೆಯು ಕೆಲವು ಪ್ರಕರಣಗಳಲ್ಲಿ ರದ್ದಾಗಿದೆ ಎಂದು ಭಾವಿಸುವುದು.**– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಭೂ ಸ್ವಾಧೀನ ಅಧಿನಿಯಮ, 1894ರ ಮೇರೆಗೆ ಪ್ರಾರಂಭಿಸಿದ ಭೂ ಸ್ವಾಧೀನ ವ್ಯವಹರಣೆಗಳ ಯಾವುದೇ ಪ್ರಕರಣದಲ್ಲಿ,–
>
> (ಎ) ಸದರಿ ಭೂ ಸ್ವಾಧೀನ ಅಧಿನಿಯಮದ 11ನೇ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡಿರದಿದ್ದರೆ, ಆಗ, ಪರಿಹಾರವನ್ನು ನಿರ್ಣಯಿಸುವುದಕ್ಕೆ ಪುನರ್ ವಸತಿಗೆ ಮತ್ತು ಪುನರ್‌ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿರುವ ಎಲ್ಲಾ ನಿಬಂಧನೆಗಳು ಅನ್ವಯವಾಗತಕ್ಕದ್ದು; ಅಥವಾ
>
> (ಬಿ) ಸದರಿ 11ನೇ ಪ್ರಕರಣದ ಮೇರೆಗೆ ಆದೇಶವನ್ನು ನೀಡಿದ್ದರೆ, ಆಗ, ಅಂಥ ವ್ಯವಹರಣೆಗಳನ್ನು, ಸದರಿ ಅಧಿನಿಯಮವನ್ನು ನಿರಸನಗೊಳಿಸಿರದಿದ್ದರೆ ಆ ವ್ಯವಹರಣೆಗಳನ್ನು ಹೇಗೆ ಮುಂದುವರಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ, ಸದರಿ ಭೂ ಸ್ವಾಧೀನ ಅಧಿನಿಯಮದ ನಿಬಂಧನೆಗಳ ಮೇರೆಗೆ ಮುಂದುವರಿಸತಕ್ಕದ್ದು.

(2) ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಭೂ ಸ್ವಾಧೀನ ಅಧಿನಿಯಮ, 1894ರ ಮೇರೆಗೆ ಪ್ರಾರಂಭಿಸಿದ ಭೂ ಸ್ವಾಧೀನ ವ್ಯವಹರಣೆಗಳ ಸಂದರ್ಭದಲ್ಲಿ, ಸದರಿ 11ನೇ ಪ್ರಕರಣದ ಮೇರೆಗೆ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಐದು ವರ್ಷಗಳ ಮುಂಚೆ ಅಥವಾ ಅದಕ್ಕೂ ಹೆಚ್ಚು ಅವಧಿಗೆ ಮುಂಚೆ ಮಾಡಿದ್ದರೆ, ಆದರೆ ಭೂಮಿಯನ್ನು ವಾಸ್ತವಿಕವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಪರಿಹಾರವನ್ನು ಸಂದಾಯ ಮಾಡಿರದಿದ್ದರೆ, ಅಂಥ ವ್ಯವಹರಣೆಗಳು ರದ್ದಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಸರ್ಕಾರವು ಈ ಅಧಿನಿಯಮದ ನಿಬಂಧನೆಗಳಿಗೆ ಅನುಸಾರವಾಗಿ ಅಂಥ ಭೂಮಿಯ ಸ್ವಾಧೀನದ ವ್ಯವಹರಣೆಗಳನ್ನು ಹೊಸದಾಗಿ ಪ್ರಾರಂಭಿಸಲು ಬಯಸಿದರೆ, ಅದು ಹಾಗೆ ಮಾಡಬಹುದು.

ಪರಂತು, ಆದೇಶವನ್ನು ಮಾಡಿದ್ದರೆ ಮತ್ತು ಭೂ ಹಿಡುವಳಿಗಳ ಪೈಕಿ ಹೆಚ್ಚಿನ ಹಿಡುವಳಿಗಳ ಸಂಬಂಧದಲ್ಲಿ ಪರಿಹಾರವನ್ನು ಫಲಾನುಭವಿಗಳ ಖಾತೆ ಠೇವಣಿ ಮಾಡಿರದಿದ್ದರೆ, ಆಗ, ಸದರಿ ಭೂ ಸ್ವಾಧೀನ ಅಧಿನಿಯಮದ 4ನೇ ಪ್ರಕರಣದ ಮೇರೆಗಿನ ಭೂ ಸ್ವಾಧೀನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಫಲಾನುಭವಿಗಳು ಈ ಅಧಿನಿಯಮದ ನಿಬಂಧನೆಗಳಿಗೆ ಅನುಸಾರವಾಗಿ ಪರಿಹಾರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

20. 24(1) ಪ್ರಕರಣವನ್ನು ತುಂಬಾ ಎಚ್ಚರಿಕೆಯಿಂದ ಅವಲೋಕಿಸಿದಾಗ, ಈ ಹೊಸ ಅಧಿನಿಯಮ 01.01.2014 ರಿಂದ ಪರಿಣಾಮಕಾರಿಯಾಗಿ ಜಾರಿಗೆ ಬಂದಿದ್ದು, ಭೂಸ್ವಾಧೀನತೆ ಅಧಿನಿಯಮದ 11ನೇ ಪ್ರಕರಣದ ಅಡಿಯಲ್ಲಿ ನಷ್ಟಪರಿಹಾರ ನಿರ್ಧಾರವಾಗಿರದಿದ್ದರೆ, ನಷ್ಟಪರಿಹಾರವನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಹೊಸ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸತಕ್ಕದ್ದು.

ಆದರೆ ಹಳೆಯ ಅಧಿನಿಯಮದಲ್ಲಿ ಈಗಾಗಲೇ ನಷ್ಟಪರಿಹಾರವನ್ನು ನೀಡಿದ್ದಲ್ಲಿ ಹಳೆಯ ಅಧಿನಿಯಮವು ನಿರಸಿತವಾಗಿಲ್ಲದಿದ್ದ ಪಕ್ಷದಲ್ಲಿ ಅದರ ಉಪಬಂಧಗಳ ಅಡಿಯಲ್ಲಿ ಮುಂದಿನ ಕಾರ್ಯವಿಧಾನವನ್ನು ಮುಂದುವರೆಸತಕ್ಕದ್ದು. ಪ್ರತ್ಯರ್ಜಿದಾರ ಸಂ.4 ಇವರು ದಾಖಲಿಸಿದ ಆಕ್ಷೇಪಣೆಗಳ ವಿವರಣೆಯಲ್ಲಿ 24ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು ಅನ್ವಯಿಸುವಂತೆ ಕೋರಿರುವುದಿಲ್ಲ. ಹಾಗೆಯೇ ದಿನಾಂಕ 10.12.2008 ರಂದು ನಿರ್ಣಯವನ್ನು ಹೊರಡಿಸಿದೆ ಮತ್ತು ಸರ್ಕಾರವು ದಿನಾಂಕ 16.11.2009 ರಂದು ಅದನ್ನು ಅನುಮೋದಿಸಿದೆ ಎಂದು ವಿವರವಾಗಿ ದಾಖಲಿಸಿರುವರು. ಆದರೆ, ಹೊಸ ಭೂಸ್ವಾಧೀನತೆ ಅಧಿನಿಯಮ ಪ್ರಾರಂಭವಾಗುವುದಕ್ಕೆ ಐದು ವರ್ಷಗಳು ಅಥವಾ ಅದಕ್ಕಿಂತ ಮುಂಚಿತವಾಗಿ ಭೂಸ್ವಾಧೀನತೆ ಅಧಿನಿಯಮ, 1894 ರ ಉಪಬಂಧಗಳ ಅಡಿಯಲ್ಲಿ ಐತೀರ್ಪನ್ನು ನೀಡಿದ್ದರೆ ಹಾಗೂ ಭೂಮಿಯನ್ನು ಭೌತಿಕವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳದಿದ್ದರೆ ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡದಿರುವಾಗ ಸದರಿ ಕಾರ್ಯವಿಧಾನ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು ಎಂದು ಹೊಸ ಅಧಿನಿಯಮದ 24ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ತಿಳಿಸಲಾಗಿದೆ ಮತ್ತು ಸಮುಚಿತ ಸರ್ಕಾರ ಈಗಾಗಲೇ ಅದನ್ನು ಆಯ್ಕೆ ಮಾಡಿಕೊಂಡಿದ್ದರೆ, ಹೊಸ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸದರಿ ಹೊಸ ಕಾರ್ಯವಿಧಾನವನ್ನು ಉಪಕ್ರಮಿಸತಕ್ಕದ್ದು.

21. ಪ್ರಸ್ತುತ ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳಿಗೆ 24ನೇ ಪ್ರಕರಣದ (2) ನೇ ಉಪಪ್ರಕರಣವು ಯಾವ ರೀತಿಯಲ್ಲಿ ಅನ್ವಯವಾಗುತ್ತದೆ ಎಂಬುದು ಇಲ್ಲಿನ ಪ್ರಶ್ನೆಯಾಗಿದೆ. ಅಪೆಕ್ಸ್ ನ್ಯಾಯಾಲಯ ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿಯಲ್ಲಿ ಭೂಮಾಲೀಕರಿಂದ ಸ್ವಾಧೀನಪಡಿಸಿಕೊಂಡ ಭೂಮಿಗಳ ನಡುವೆ ಯಾವುದೇ ತಾರತಮ್ಯತೆ ಇಲ್ಲದೆ ಭೂಮಿಯ ಬೆಲೆ ನಿರ್ಧರಣೆ ಮತ್ತು ನಷ್ಟಪರಿಹಾರವನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ನೀಡಿದ ಅಪೆಕ್ಸ್ ನ್ಯಾಯಾಲಯವು ಪೂರ್ವವರ್ತಿ ಕಂಡಿಕೆಯನ್ನು ಉಲ್ಲೇಖಿಸಿ, ಅದರಂತೆಯೇ ತೀರ್ಪುಗಳ ಅನುಪಾತವನ್ನು ಪರಿಗಣಿಸಿದೆ.

22. ಹೊಸ ಭೂಸ್ವಾಧೀನತೆ ಅಧಿನಿಯಮವು, ರಾಜ್ಯದ ಕಾನೂನಿನ ಅನುಸಾರ ಎಂದರೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿಯಲ್ಲಿ ಎಲ್ಲೆಲ್ಲಿ ಸ್ವಾಧೀನತೆ ಪೂರ್ಣಗೊಂಡಿರುವುದಿಲ್ಲವೋ ಅಥವಾ ನಷ್ಟ ಪರಿಹಾರವನ್ನು ನೀಡಿಲ್ಲದಿರುವಾಗ ಅಥವಾ ನಷ್ಟ ಪರಿಹಾರದ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಐದು ವರ್ಷಗಳು ಹೆಚ್ಚಿನ ದಿನಗಳವರೆಗೂ ಸ್ವಾಧೀನತೆಗೆ ತೆಗೆದುಕೊಂಡಿಲ್ಲದಿರುವಾಗ ಅಷ್ಟರಮಟ್ಟಿಗೆ ಈ ಹೊಸ ಅಧಿನಿಯಮವು ನ್ಯಾಯೋಚಿತ ಪರಿಹಾರಕ್ಕೆ ಹಕ್ಕುಗಳು ಅನ್ವಯವಾಗುವುದನ್ನು ಅದು ಉಪಬಂಧಿಸುತ್ತದೆ. ಸ್ವಾಧೀನತೆ ಮೊಕದ್ದಮೆಗಳಲ್ಲಿ 24(2)ನೇ ಪ್ರಕರಣದ ಕಾರಣದಿಂದಾಗಿ ನಷ್ಟಪರಿಹಾರವನ್ನು ಹೊರಡಿಸಿ ಐದು ವರ್ಷಗಳು ಆಗಿದ್ದು ಅಥವಾ ಹೊಸ ಅಧಿನಿಯಮ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಸ್ವಾಧೀನಗೊಂಡಿದ್ದು, ಆದರೆ ಭೌತಿಕವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲದಿರುವಾಗ ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡದಿರುವಾಗ ಅದರ ಪರಿಣಾಮವಾಗಿ ಈ ಕಾರ್ಯವಿಧಾನ ರದ್ದಾಗಿದೆ ಎಂದು ಭಾವಿಸತಕ್ಕದ್ದು ಎಂದು ಅದು ತಿಳಿಸಿರುತ್ತದೆ. ಆದಾಗ್ಯೂ, ರಾಜ್ಯ ಹೊಸ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಹೊಸ ಕಾರ್ಯವಿಧಾನವನ್ನು ಉಪಕ್ರಮಿಸುವುದಕ್ಕೆ ಹಕ್ಕನ್ನು ಹೊಂದಿರುತ್ತದೆ. 24 (2)ನೇ ಪ್ರಕರಣವನ್ನು ಒಳಗೊಂಡ ಹೊಸ ಅಧಿನಿಯಮದಲ್ಲಿ ಉಪಬಂಧಗಳ ವ್ಯಾಪ್ತಿ, ಉದ್ದೇಶ ಮತ್ತು ಧ್ಯೇಯವನ್ನು ತುಂಬಾ ಜಾಗೂರಕತೆಯಿಂದ ಪರಿಶೀಲಿಸಿದಾಗ, ತಿದ್ದುಪಡಿ ಅಧಿನಿಯಮ 68/1984ರ ಮೂಲಕ ಸೇರಿಸಲಾದ 11ಎ ಪ್ರಕರಣದ ವ್ಯಾಪ್ತಿ ಮತ್ತು ಉದ್ದೇಶವನ್ನು ಅದು ಸಮೀಕರಿಸಿರುವುದಿಲ್ಲ ಅಥವಾ ನಿರ್ಬಂಧಿಸಿಲ್ಲದಿರುವುದು ಕಂಡುಬರುತ್ತದೆ.

23. ಸಂಸತ್ತು ಹೊಸ ಅಧಿನಿಯಮವನ್ನು ಅಧಿನಿಯಮಿಸುವ ಮೂಲಕ ಈ ಉಪಬಂಧಗಳ ಹಿಂದಿನ ಉದ್ದೇಶ ಮತ್ತು ಧ್ಯೇಯವು ಹಲವಾರು ವರ್ಷಗಳಿಂದ ನಷ್ಟಪರಿಹಾರವನ್ನು ಸಂದಾಯ ಮಾಡದೇ ಹಳೆಯ ಭೂಸ್ವಾಧೀನತೆ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸೂಕ್ತವಲ್ಲದ ಮತ್ತು ಪರ್ಯಾಯವಲ್ಲದ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ, ಪರಿಹಾರವನ್ನು ಸ್ವೀಕರಿಸುವುದಕ್ಕೆ ಒತ್ತಾಯ ಪಡಿಸುವ ಸಂಬಂಧದಲ್ಲಿ ಭೂಮಾಲೀಕರಿಗೆ ಸಮಗ್ರವಾಗಿ ನ್ಯಾಯೋಚಿತ ನಷ್ಟಪರಿಹಾರದ ಪ್ಯಾಕೇಜ್‌ಅನ್ನು ಸಂದಾಯ ಮಾಡುವುದನ್ನು ಸುನಿಶ್ಚಿತಪಡಿಸುವ

ಸಂಬಂಧದಲ್ಲಿ ಭೂಮಾಲೀಕ ವ್ಯಕ್ತಿಗೆ ಜೀವನಾಧಾರ ಭತ್ಯೆ, ಉದ್ಯೋಗ, ಮನೆಗಳೂ, ಸಾರಿಗೆ ಭತ್ಯೆ ಮತ್ತು ಪುನರ್ ವ್ಯವಸ್ಥೆ ಭತ್ಯೆ ಮುಂತಾದವುಗಳನ್ನು ಒಳಗೊಳ್ಳುವಂತಹ ಸಮಗ್ರ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಪ್ಯಾಕೇಜ್‌ನೊಂದಿಗೆ ಅವನ ಭೂಮಿಗೆ ಮಾರುಕಟ್ಟೆ ಮೌಲ್ಯದ ಎರಡರಷ್ಟನ್ನು ಲೆಕ್ಕಹಾಕುವಂತಹ ವೈಜ್ಞಾನಿಕ ರೀತಿಯನ್ನು ಅನ್ವಯಿಸಿಕೊಳ್ಳುವ ಮೂಲಕ ಭೂಮಾಲೀಕರಿಗೆ ಬದುಕನ್ನು ಸುನಿಶ್ಚಿತಗೊಳಿಸುವಂತಹ ಉದ್ದೇಶ ಮತ್ತು ಧ್ಯೇಯವನ್ನು ಈ ಹೊಸ ಅಧಿನಿಯಮ ಹೊಂದಿದೆ. ಈ ಹೊಸ ಭೂಸ್ವಾಧೀನ ಅಧಿನಿಯಮದ ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿ ಅನೇಕ ಆಕ್ಷೇಪಣೆಗಳು ಒಳಗೊಂಡಿರುವುದು ಇದು ಸಾಕ್ಷಿಯಾಗಿದೆ. ಭೂಸ್ವಾಧಿನತೆ ಅಧಿನಿಯಮದ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳುವ ಜಮೀನಿನ ಮಾಲೀಕನಿಗೆ ಲಭ್ಯವಾಗುವಂತಹ ಫಲಾನುಭವಗಳು ಇದ್ದರೆ ಮತ್ತು ಹೊಸ ಭೂಸ್ವಾಧೀನತೆ ಅಧಿನಿಯಮದ ಪ್ರಾರಂಭಕ್ಕೆ ಐದು ವರ್ಷಗಳ ಅಥವಾ ಅದಕ್ಕೂ ಮುಂಚೆ ಭೂಸ್ವಾಧೀನತೆ ಅಧಿನಿಯಮ, 1894ರ 11ನೇ ಪ್ರಕರಣದ ಅಡಿಯಲ್ಲಿ ನಷ್ಟ ಪರಿಹಾರವನ್ನು ಯಾರ ಪರವಾಗಿ ಹೊರಡಿಸಲಾಗಿದೆಯೋ ಹಾಗೂ ಅದರ ಭೌತಿಕ ಸ್ವಾಧೀನತೆಯನ್ನು ಪಡೆಯದಿದ್ದರೆ ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡದಿದ್ದರೆ, ನಂತರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966ರ ಉಪಬಂಧಗಳ ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಭೂಮಾಲೀಕರ ಪರವಾಗಿ ಅಂಥ ಫಲಾನುಭವಗಳನ್ನು ನಿರಾಕರಿಸಿರುವುದು ಕಂಡುಬಂದರೆ ಅದು ಭಾರತ ಸಂವಿಧಾನದ 14ನೇ ಅನುಚ್ಛೇದ ಅಡಿಯಲ್ಲಿ ಭೂಮಾಲೀಕನ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ. ಆದುದರಿಂದ ಹೊಸ ಅಧಿನಿಯಮದ 24ನೇ ಪ್ರಕರಣವು ಈ ಹೊಸ ಭೂಸ್ವಾಧೀನತೆ ಅಧಿನಿಯಮ ಜಾರಿಗೆ ಬರುವ ಮುಂಚೆ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಸಂಬಂಧದಲ್ಲಿ ಅದರ ನಷ್ಟಪರಿಹಾರವನ್ನು ಮತ್ತು ಸಂದಾಯವನ್ನು ನಿರ್ಧರಿಸುವಂತಹ ವ್ಯವಹರಣೆಗಳ ಸತ್ವವನ್ನು ಹೊಂದಿದೆ. 24ನೇ ಪ್ರಕರಣದ (2)ನೇ ಉಪಪ್ರಕರಣದ ಪರಿಣಾಮವು ಹೊಸ ಭೂಸ್ವಾಧೀನತೆ ಅಧಿನಿಯಮ ಜಾರಿಗೆ ಬರುವ ಮುಂಚೆಯೇ ಸ್ವಾಧೀನತೆಯನ್ನು ಉಪಕ್ರಮಿಸಿಕೊಂಡ ಮೊಕದ್ದಮೆಗಳಲ್ಲಿ ನಷ್ಟ ಪರಿಹಾರವನ್ನು ಹೊರಡಿಸಿದ ದಿನಾಂಕದಿಂದ ಐದು ವರ್ಷಗಳ ಅಥವಾ ಹೆಚ್ಚಿನ ಕಾಲವು ಪೂರ್ಣಗೊಂಡಿಲ್ಲದಿದ್ದರೂ ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡಿದ್ದರೂ ಅಥವಾ ಜಮೀನನ್ನು ಭೌತಿಕವಾಗಿ

ಸ್ವಾಧೀನತೆ ಪಡೆದುಕೊಂಡಿದ್ದರೂ ಹಳೆಯ ಅಧಿನಿಯಮದ ಅಡಿಯಲ್ಲಿ ಸದರಿ ಕಾರ್ಯವಿಧಾನಗಳನ್ನು ಮುಂದುವರೆಸತಕ್ಕದ್ದಲ್ಲ. ಕಾರಣವೇನೆಂದರೆ, ಹಳೆಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯವಾದ ನಷ್ಟಪರಿಹಾರವು ಅವಾಸ್ತವಾಗಿರುತ್ತದೆ, ನ್ಯಾಯಯುತವಾಗಿರದ ಕಾರಣ ಸಂವಿಧಾನದ 14ನೇ ಅನುಚ್ಛೇದ ಮೂಲಭೂತ ಹಕ್ಕುಗಳ ಸಂವಿಧಾನದ 300ಎ ಅನುಚ್ಛೇದದ ಅಡಿಯಲ್ಲಿ ನ್ಯಾಯಯುತ ನಷ್ಟಪರಿಹಾರವನ್ನು ಖಾತರಿ ಪಡಿಸುವುದಕ್ಕಾಗಿ ಮಾಲೀಕರು ತಮ್ಮ ಕಾನೂನು ಸಮ್ಮತ ಹಕ್ಕನ್ನು ಪಡೆಯಲು ಹಳೆಯ ಅಧಿನಿಯಮವು ನಿರಾಕರಿಸುತ್ತದೆ. ಆದುದರಿಂದ, ಸರ್ಕಾರ ಅಂಥ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದರೆ, ಅದು ಪ್ರಾರಂಭಿಕ ಅಧಿಸೂಚನೆ ಪ್ರಕಟವಾದ ದಿನಾಂಕದಂದು ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಆಧಾರವಾಗಿಟ್ಟುಕೊಂಡು ನಷ್ಟಪರಿಹಾರ ಲೆಕ್ಕ ಹಾಕುವಂತಹ ಹೊಸ ಕಾರ್ಯವಿಧಾನವನ್ನು ಉಪ ಕ್ರಮಿಸಬೇಕಾಗುತ್ತದೆ. ಇದರ ಪರಿಣಾಮವಾಗಿ ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಿ ಅಥವಾ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿಯಲ್ಲಿ ಸ್ವಾಧೀನ ಕಾರ್ಯ ವಿಧಾನಗಳನ್ನು ಉಪಕ್ರಮಿಸುವ ವಿಷಯವೇ ಬರುವುದಿಲ್ಲ, ಎಂದರೆ ದೀರ್ಘಾವಧಿ ಉದ್ದೇಶದ ಹಿನ್ನೆಲೆಯಲ್ಲಿ ಶಾಸನವು ತುರ್ತು ಮತ್ತು ನ್ಯಾಯಯುತ ನಷ್ಟಪರಿಹಾರವನ್ನು ಉಪಬಂಧಿಸುವುದಕ್ಕೆ ಹಳೆಯ ಸ್ವಾಧೀನ ಕಾರ್ಯವಿಧಾನಗಳು ಖಂಡಗಳು ಹೊಸ ಭೂಸ್ವಾಧೀನತೆ ಅಧಿನಿಯಮದ ಅಡಿಯಲ್ಲಿ ಅಥವಾ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಯಾವುದೇ ಉಪಬಂಧಗಳ ಅಡಿಯಲ್ಲಿ. ಅದರಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ 29ನೇ ಮತ್ತು 30ನೇ ಪ್ರಕರಣದ ಅಡಿಯಲ್ಲಿನ ಹಳೆಯ ಸ್ವಾಧೀನತೆಗಳು ಸುಸಂಗತವಾಗಿರುವುದಿಲ್ಲ, ಭೂಸ್ವಾಧೀನತೆ ಅಧಿನಿಯಮದ ಉಪಬಂಧಗಳು ವಿಚಾರಣೆ ಮತ್ತು ನಷ್ಟಪರಿಹಾರದ ನಿರ್ಣಯಗಳ, ನ್ಯಾಯಾಲಯಗಳಿಗೆ ಉಲ್ಲೇಖಿಸಲು, ನಷ್ಟಪರಿಹಾರ ಹಂಚಿಕೆ ಮತ್ತು ನಷ್ಟ ಪರಿಹಾರದ ಸಂದಾಯದ ಸಂಬಂಧದಲ್ಲಿ ಯಥೋಚಿತ ವ್ಯತ್ಯಾಸಗಳನ್ನು ಅನ್ವಯಿಸಿಕೊಳ್ಳತಕ್ಕದ್ದು.

24. ಸರ್ವೋಚ್ಚ ನ್ಯಾಯಾಲಯ ***ಮಧ್ಯಪ್ರದೇಶ ರಾಜ್ಯ –ವಿರುದ್ಧ– ಎಂ.ವಿ. ನರಸಿಂಹನ್ (ಮೇಲಿನ)*** ಮೊಕದ್ದಮೆಯಲ್ಲಿ ಶಾಸನದ ನಿಯಮಕ್ಕೆ ತಿದ್ದುಪಡಿಗಳನ್ನು

ನಿಗಮಿತಗೊಳಿಸಲು ನಾಲ್ಕು ವಿನಾಯಿತಿಗಳನ್ನು ನಿರೂಪಿಸಿ ಮಂಡಿಸಿದೆ, ಅವುಗಳು ಈ ಕೆಳಗಿನಂತಿವೆ:

(ಎ) ತರುವಾಯುದ ಅಧಿನಿಯುಮ ಮತ್ತು ಹಿಂದಿನ ಅಧಿನಿಯಮ ಒಂದಕ್ಕೊಂದು ಪೂರಕವಾಗಿದ್ದಲ್ಲಿ;

(ಬಿ) ಎರಡು ಅಧಿನಿಯಮಗಳ ವಸ್ತು ವಿಷಯಗಳಲ್ಲಿ ಸಾಮ್ಯತೆ ಇದ್ದಲ್ಲಿ;

(ಸಿ) ಹಿಂದಿನ ಅಧಿನಿಯಮದಲ್ಲಿ ಆಗಿರುವ ತಿದ್ದುಪಡಿ ತರುವಾಯದ ಅಧಿನಿಯಮದೊಳಗೆ ಅದರ ಅವಶ್ಯಕತೆ ಇರದಿದ್ದರೇ, ಆ ತಿದ್ದುಪಡಿ ತರುವಾಯ ಅಧಿನಿಯಮವನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಮತ್ತು ಪರಿಣಾಮಕಾರಿಯಾಗಲು ಅಡ್ಡಿಯುಂಟು ಮಾಡಿದ್ದಲ್ಲಿ; ಮತ್ತು

(ಡಿ) ಹಿಂದಿನ ಅಧಿನಿಯಮದ ತಿದ್ದುಪಡಿಗಳು ತರುವಾಯದ ಅಧಿನಿಯುಮವನ್ನು ಸದರಿ ಉಪಬಂಧಗಳಾಗಿ ವ್ಯಕ್ತವಾಗಿದ್ದಲ್ಲಿ ಅಥವಾ ಅವಶ್ಯಕ ಉದ್ದೇಶಿತಗಳೆಂದು ಅನ್ವಯಿಸಿದ್ದಲ್ಲಿ. ಈ ನಾಲ್ಕು ಸಂದರ್ಭಗಳಲ್ಲಿ ತಿದ್ದುಪಡಿಗಳನ್ನು ನಿಗಮಿತಗೊಳಿಸಲು ವಿನಾಯಿತಿ ನೀಡಬೇಕೆಂದು ನಿರ್ದೇಶಿಸಿದೆ.

25. ಸರ್ವೋಚ್ಚ ನ್ಯಾಯಾಲಯವು ಮೊಕದ್ದಮೆಗಳಲ್ಲಿ ***ನಾಗಭೂಷಣ್ (ಮೇಲಿನ)*** ಮತ್ತು ***ಗಿರ್‌ನಾರ್ ಟ್ರೇಡರ್ಸ್*** ಕೆಐಎಡಿ ಅಧಿನಿಯಮ ಮತ್ತು ಎಂಆರ್‌ಟಿಪಿ ಅಧಿನಿಯಮವು ಪರ್ಯಾಪ್ತ ಸಂಹಿತೆಗಳಾಗಿವೆ, 11ಎ ಪ್ರಕರಣವು ಸ್ವಾಧೀನತೆಯ ಕಾಲಾವಧಿಯನ್ನು ನಿರ್ದಿಷ್ಟಪಡಿಸಿದೆ ಮತ್ತು ಕೆಐಎಡಿ ಮತ್ತು ಎಂಆರ್‌ಟಿಪಿ

ಅಧಿನಿಯಮಗಳ ಅಡಿಯಲ್ಲಿ ಸ್ವಾಧೀನತೆಗಾಗಿ ಕಾರ್ಯವಿಧಾನಗಳು ರದ್ದುಗೊಂಡು ಅನ್ಯಾಯವಾಗದಿರುವುದು ಒಳಗೊಂಡಂತೆ ಅದರ ಗೈರುಹಾಜರಿಯ ಪರಿಣಾಮವಾಗಿ ಸ್ಥಳೀಯ ಅಧಿನಿಯಮಗಳ ಧ್ಯೇಯ ಮತ್ತು ಉದ್ದೇಶಗಳನ್ನು ತಡೆಯುವುದಕ್ಕೆ ಕೆಐಎಡಿ ಮತ್ತು ಎಂಆರ್‌ಟಿಪಿ ಅಧಿನಿಯಮದಲ್ಲಿ ಭೂಸ್ವಾಧೀನತೆ ಅಧಿನಿಯಮದ ಕೆಲವು ಉಪಬಂಧಗಳನ್ನು ಉಲ್ಲೇಖಿಸುವುದರಿಂದ ಈ ಅಧಿನಿಯಮಗಳ ಉದ್ದೇಶವನ್ನು ಪರಿಮಿತಗೊಳಿಸಲು ಬಳಸತಕ್ಕದ್ದಲ್ಲ. ಹೆಚ್ಚಿಗೆಯಾಗಿ, ಈ ಹೊಸ ಭೂಸ್ವಾಧೀನ ಅಧಿನಿಯಮ ಕೇಂದ್ರ ಅಧಿನಿಯಮವಾಗಿರುತ್ತದೆ. ಅದನ್ನು ಸ್ಥಳೀಯ ಅಧಿನಿಯಮಗಳಿಗೆ ಪೂರಕವೆಂದು ಪರಿಗಣಿಸಬಾರದು ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

26. ಅಧಿನಿಯಮಿತಗೊಂಡ ಹೊಸ ಭೂಸ್ವಾಧೀನತೆ ಅಧಿನಿಯಮದ ಬೆಳಕಿನಲ್ಲಿ ಸಂಪೂರ್ಣ ಚಿತ್ರಣವೇ ಬದಲಾಗಿದೆ. (10ನೇ ಪ್ರಕರಣ) ಸ್ವಾಧೀನತೆಯಿಂದ ಬಹುಬೆಳೆ ಬೆಳೆಯುವ ಜಮೀನುಗಳನ್ನು ಹೊರತುಪಡಿಸಿ (ಭೂಸ್ವಾಧೀನ ಅಧಿನಿಯಮ) 2013ರ 4 ರಿಂದ 9ನೇ ಪ್ರಕರಣ) ಪ್ರಾರಂಭಿಕ ಅಧಿಸೂಚನೆಯನ್ನು ಪ್ರಕಟಿಸುವ ಮುಂಚೆ ಸಾಮಾಜಿಕ ಪ್ರಭಾವ ನಿರ್ಧರಣೆ ವರದಿಯನ್ನು ಸಿದ್ಧಪಡಿಸುವುದು ಅಗತ್ಯವಿರುವುದನ್ನು, ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನಿನ ಸ್ವಾಧೀನತೆಯ ವಿಷಯದಲ್ಲಿ, ಶೇ 100 ರಷ್ಟು ನಷ್ಟ ಭರ್ತಿಯ ಪರಿಹಾರವನ್ನು (16 ರಿಂದ 18 ಪ್ರಕರಣದ) ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿ, ಉಪಬಂಧವನ್ನು, ಪರ್ಯಾಯ ಜಮೀನನ್ನು ಹಂಚಿಕೆ ಮಾಡುವ (30ನೇ ಪ್ರಕರಣ), ಒಂದೇ ಬಾರಿ ಜೀವನೋಪಾಯ ಭತ್ಯೆ, ಎಸ್‌ಸಿ/ಎಸ್‌ಟಿ ಮುಂತಾದವರಿಗಾಗಿ ವಿಶೇಷ ಉಪಬಂಧಗಳು ಸಂಬಂಧದಲ್ಲಿ ಹೊಸ ಭೂಸ್ವಾಧೀನ ಅಧಿನಿಯಮ ಒಟ್ಟಿಗೆಯಾಗಿ ಗಮನಾರ್ಹವಾದ ಬದಲಾವಣೆಯನ್ನು ತಂದಿದೆ.

27. ಹೊಸ ಅಧಿನಿಯಮದ 107ನೇ ಮತ್ತು 108ನೇ ಪ್ರಕರಣವನ್ನು ಅವಲೋಕಿಸಿದಾಗ ಅದು ರಾಜ್ಯವು ಭೂಮಿಯನ್ನು ಕಳೆದುಕೊಂಡವರಿಗೆ ಹೆಚ್ಚಿನ ನಷ್ಟಪರಿಹಾರ ಅಥವಾ ಉತ್ತಮ ಪುನರ್‌ವಸತಿ ಕಲ್ಪಿಸುವ ಸಂಬಂಧದಲ್ಲಿ ಫಲಾನುಭವಗಳನ್ನು ವಿಸ್ತೃತಗೊಳಿಸುವ ಅಥವಾ ಹೆಚ್ಚಿಸಲು ಉಪಬಂಧಿಸಿ ಯಾವುದೇ

ಕಾನೂನನ್ನು ಅಧಿನಿಯಮಿತಗೊಳಿಸುವುದಕ್ಕೆ ರಾಜ್ಯವು ಮುಕ್ತವಾಗಿರುತ್ತದೆ ಎಂದು ಸ್ಪಷ್ಟವಾಗಿ ತಿಳಿಸಿರುವುದು ಕಂಡುಬರುತ್ತದೆ. ಮತ್ತಷ್ಟು ಮುಂದುವರೆದು ಹೊಸ ಭೂಸ್ವಾಧೀನತೆ ಅಧಿನಿಯಮ, 2013 ರಲ್ಲಿ ಕೊನೆಪಕ್ಷ ಕನಿಷ್ಠ ಫಲಾನುಭವಿಗಳನ್ನು ನಿಗದಿಪಡಿಸುವುದಕ್ಕಾಗಿ ಸ್ಥಳೀಯ ಕಾನೂನುಗಳೂ ಅವಕಾಶ ಕಲ್ಪಿಸದೇ ಇದ್ದರೆ, ಭೂಮಿಯನ್ನು ಕಳೆದುಕೊಂಡವರಿಗೆ ಸ್ಥಳೀಯ ಕಾನೂನುಗಳ ಅಡಿಯಲ್ಲಿ ಉತ್ತಮ ಫಲಾನುಭವಗಳನ್ನು ವ್ಯಾಪ್ತಗೊಳಿಸುವುದಕ್ಕೂ ಅದು ಸ್ಪಷ್ಟವಾಗಿ ತಿಳಿಸಿರುವುದು ಕಂಡುಬರುತ್ತದೆ, ಆದರೂ ಸಂಬಂಧಪಟ್ಟ ಭೂಮಿಯನ್ನು ಕಳೆದುಕೊಂಡವರಷ್ಟರ ಮಟ್ಟಿಗೆ ಈ ಉಪಬಂಧಗಳನ್ನು ಜಾರಿಗೊಳಿಸದಿದ್ದಲ್ಲಿ ಸಂವಿಧಾನದ 14ನೇ ಅನುಚ್ಛೇಧದ ನಿರ್ದಿಷ್ಟ ಅಸಮಾಧಾನಕ್ಕೆ ಈಡಾಗುವಂಥ ಪರಿಸ್ಥಿತಿ ಉದ್ಭವಿಸುತ್ತದೆ.

28. ಹಾಗಾಗಿ, ಹೊಸ ಶಾಸನವನ್ನು ಅಧಿನಿಯಮಿತಗೊಳಿಸುವ ಮೂಲಕ ಭೂಸ್ವಾಧೀನತೆ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡಿದ್ದರೆ ಅದು ಕೆಐಎಡಿ ಅಧಿನಿಯಮದೊಳಗೆ ಒಳಗೊಳ್ಳುವುದಿಲ್ಲವೆಂದಿದ್ದರೂ, ಈಗ ನಾವು ಸಂಬಂಧಪಟ್ಟ ಈ ಅಧಿನಿಯಮದ 24(2) ನೇ ಪ್ರಕರಣದ ಅಡಿಯಲ್ಲಿ ಉಪಬಂಧಗಳ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ 14ನೇ ಅನುಚ್ಛೇಧವನ್ನು ಇಡಿಯಾಗಿ ಕಾರ್ಯಗತಗೊಳಿಸಲು ಕೆಐಎಡಿ ಅಧಿನಿಯಮವನ್ನು ಬಳಸಿಕೊಂಡಿದೆ. ಆದುದರಿಂದ, ನಷ್ಟ ಪರಿಹಾರದ ಸಂದಾಯ ಮುಂತಾದವುಗಳ ಸಂಬಂಧದಲ್ಲಿ ಭೂಸ್ವಾಧೀನತೆ ಅಧಿನಿಯಮದ ಕೆಲವು ಉಪಬಂಧಗಳನ್ನು ಕೆಐಎಡಿ ಅಧಿನಿಯಮಕ್ಕೆ ನಿಗಮಿತಗೊಳಿಸುವುದು ವಾಸ್ತವವಾಗಿದೆ ಮತ್ತು ಅದರಿಂದ ಅಧಿನಿಯಮದ 24(2)ನೇ ಪ್ರಕರಣದಲ್ಲಿ ಉಪಬಂಧಿಸಿದ ನ್ಯಾಯೋಚಿತ ನಷ್ಟ ಪರಿಹಾರ ಮತ್ತು ಇತರ ಪ್ರಯೋಜನಗಳನ್ನು ಪಡೆದುಕೊಳ್ಳುವಲ್ಲಿ ಭೂಮಿಯನ್ನು ಕಳೆದುಕೊಂಡವರು ಹಿತಾಸಕ್ತಿಯನ್ನು ಸಂರಕ್ಷಿಸುವಲ್ಲಿ ನಿಗಮಿತಗೊಂಡ ಶಾಸನವು ಯಾವುದೇ ವ್ಯತ್ಯಾಸವನ್ನು ಮಾಡುವುದಿಲ್ಲ.

29. ನಷ್ಟ ಪರಿಹಾರವನ್ನು ಸಂದಾಯ ಮಾಡುವ ಸಂದರ್ಭ ಬಂದಾಗ, ಹೊಸ ಅಧಿನಿಯಮದ ಅಡಿಯಲ್ಲಿ ನಷ್ಟ ಪರಿಹಾರದ ನಿರ್ಧರಣೆಯನ್ನು, ಸಂದಾಯವಾಗ ಬಹುದಾದ ಮಾರುಕಟ್ಟೆ ಮೌಲ್ಯ, ನಷ್ಟ ಭರ್ತಿ, ಬಡ್ಡಿ ಮತ್ತು ಇತರ ಮೊಬಲಗುಗಳನ್ನು ಒಳಗೊಳ್ಳುವಂತೆ ಅದು ಉಪಬಂಧಿಸಿರುತ್ತದೆ ಮತ್ತು 24ನೇ ಪ್ರಕರಣದ ಅಡಿಯಲ್ಲಿ

ಬರುವಂತಹ ಆ ಯಾವುದೇ ಹಳೆಯ ಮೊಕದ್ದಮೆಗಳೂ ಅದೇ ರೀತಿಯ ನಷ್ಟಪರಿಹಾರವನ್ನು ಸಂದಾಯ ಮಾಡುವುದರಲ್ಲೂ ಸಹ ಅವಶ್ಯವಾಗಿ ಒಳಗೊಳ್ಳುತ್ತದೆ. ಸಂವಿಧಾನದ 14ನೇ ಅನುಚ್ಛೇಧದ ಅಡಿಯಲ್ಲಿ ಭೂಮಿಯನ್ನು ಕಳೆದುಕೊಂಡವರ ಹಕ್ಕುಗಳನ್ನು ಉಲ್ಲಂಘಿಸಿ ನಿರೂಪಿತ ತಾರತಮ್ಯತೆಯನ್ನು ನಿವಾರಿಸುವುದು ನಷ್ಟ ಪರಿಹಾರ ಸಂದಾಯದ ಸಂಬಂಧದಲ್ಲಿ ಅದರ ಪ್ರಯೋಜನಗಳನ್ನು ವ್ಯಾಪಕಗೊಳಿಸುವ ವಸ್ತು ವಿಷಯದಲ್ಲಿ ಮಾಡಿದ ಆ ಯಾವುದೇ ಸ್ವಾಧೀನತೆಯ ಅಡಿಯಲ್ಲಿ ಸ್ವಾಧೀನತೆಯ ಉದ್ದೇಶವನ್ನು ಅಥವಾ ಕಾನೂನಿನ ಉಪಬಂಧಗಳನ್ನು ಉಲ್ಲೇಖಿಸುವುದರೊಂದಿಗೆ ತಾರತಮ್ಯತೆಯನ್ನು ನಿವಾರಿಸುಬಹುದಾಗಿದೆ. ಆದುದರಿಂದ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಅಡಿಯಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನುಗಳ ಸಂದರ್ಭದಲ್ಲೂ ಸಹ 24ನೇ ಪ್ರಕರಣದ ಉಪಬಂಧಗಳು ಅನ್ವಯವಾಗುತ್ತದೆ ಎಂದು ಅಭಿಪ್ರಾಯಪಡಬಹುದಾಗಿದೆ.

30. ಈ ನ್ಯಾಯಾಲಯ ಈಗಾಗಲೇ ನಿರ್ಣಯಿಸಿದ ***ಶ್ರೀಮತಿ ಚಿಕ್ಕತಾಯಮ್ಮ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** [14] ಮೊಕದ್ದಮೆಯಲ್ಲಿ ಹೊಸ ಭೂಸ್ವಾಧೀನತೆ ಅಧಿನಿಯಮ, 2013 ರ 24(2) ನೇ ಪ್ರಕರಣದ ಉಪಬಂಧಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಅಡಿಯಲ್ಲಿ ಸ್ವಾಧೀನತಾ ಕಾರ್ಯವಿಧಾನಗಳಿಗೂ ಅನ್ವಯವಾಗುತ್ತವೆಯೆಂದು ಎಂಬ ನಿರ್ಣಯವನ್ನು ಸಹ ಈ ನ್ಯಾಯಾಲಯವು ಗಮನಕ್ಕೆ ತಂದು ಕೊಂಡಿರುತ್ತದೆ.

31. ಪರಿಗಣನೆಗಾಗಿ ಉದ್ಭವವಾಗುವ ತರುವಾಯದ ಪ್ರಶ್ನೆಯೆಂದರೆ, ಪ್ರಸ್ತುತ ಮೊಕದ್ದಮೆಯ ಸಂಗತಿಗಳಲ್ಲಿ ಮತ್ತು ಸನ್ನಿವೇಶಗಳು ಹೊಸ ಭೂಸ್ವಾಧೀನತೆ ಅಧಿನಿಯಮ ಜಾರಿಗೆ ಬರುವ ಮುಂಚೆ ಐದು ವರ್ಷಗಳು ಅಥವಾ ಹೆಚ್ಚಿನ ಅವಧಿಯಲ್ಲಿ ನಷ್ಟಪರಿಹಾರದ ಐತೀರ್ಪನ್ನು ಹೊರಡಿಸಲಾಗಿದೆಯೆ, ಅದೂ 01.01.2014ಕ್ಕೆ ಮುಂಚಿನ ಐದು ವರ್ಷಗಳಿಗಿಂತ ಮುಂಚಿತವಾಗಿದೆಯೆ ಆದರೆ

14. 2016 (2) ಎಕೆಆರ್ 737

ಜಮೀನನ್ನು ಭೌತಿಕವಾಗಿ ಸ್ವಾಧೀನಕ್ಕೆ ಪಡೆದಿಲ್ಲವೇ ಅಥವಾ ನಷ್ಟಪರಿಹಾರವನ್ನು ಸಂದಾಯ ಮಾಡಿಲ್ಲವೇ? ಎಂಬುದಾಗಿದೆ.

32. ಅರ್ಜಿದಾರರು 01.08.2014 ರಂದು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ದಾಖಲಿಸಿದ ಅರ್ಜಿಯ ಅನುಬಂಧ–ಜಿ ಮತ್ತು ಜಿ1 ರಿಂದ ಕಂಡುಬರುವ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ–II ಕೆಐಎಡಿಬಿ ಬೆಂಗಳೂರು. ಇವರು ದಿನಾಂಕ 26/27.08.2014 ರಂದು ಸ್ವಾಧೀನ ಪಡಿಸಿಕೊಂಡ ಜಮೀನನ್ನು ಸ್ವಾಧೀನತೆಗೆ ತೆಗೆದುಕೊಂಡಿಲ್ಲವೆಂದು ಜಾರಿಮಾಡಿದ ಹಿಂಬರಹವನ್ನು ಅರ್ಜಿಯೊಂದಿಗೆ ಲಗತ್ತಿಸಿರುವರು. ಅರ್ಜಿದಾರರು ಸರ್ವೆ ನಂ: 370, 371, 375 ಮತ್ತು 377/2ರ ಸಂಬಂಧದಲ್ಲಿ ಕಂದಾಯ ದಾಖಲೆಗಳಲ್ಲೂ ಅರ್ಜಿದಾರರು ಕೆಲವರ ಹೆಸರುಗಳು ಹಾಗೆಯೇ ಮುಂದುವರೆದಿರುವ ಬಗ್ಗೆ ಅನುಬಂಧ–ಎ1 ಮತ್ತು ಎ2 ರಲ್ಲಿ ಹಾಜರುಪಡಿಸಿರುವರು. ಜಮೀನುಗಳ ಸ್ವಾಧೀನತೆ ಪೂರ್ಣಗೊಂಡಿರುವ ಬಗೆಗಿನ ಸಾಕ್ಷ್ಯವಾಗಿ ಜಾರಿಮಾಡಿದ ಅಧಿಸೂಚನೆಗಳು ಇರುವುದಿಲ್ಲ. ಅರ್ಜಿದಾರರಿಗೆ ಸೇರಿದ ಸ್ವಾಧೀನಪಡಿಸಿಕೊಂಡ ಜಮೀನುಗಳ ಸಂಬಂಧದಲ್ಲಿ ನಷ್ಟಪರಿಹಾರವನ್ನು ಯಾವುದೇ ದರದಲ್ಲಿ ನಿಗದಿಪಡಿಸಿದ ಮಹತ್ವದ ದಾಖಲೆಗಳು, ಸಂದಾಯ ಮಾಡಿದ ಅಥವಾ ಠೇವಣಿ ಇಟ್ಟ ಯಾವ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಪ್ರತ್ಯರ್ಜಿದಾರರು ಸಂದಾಯ ಮಾಡಿದ ಅಥವಾ ಠೇವಣಿ ಇಟ್ಟ ನಷ್ಟಪರಿಹಾರದ ಮೊಬಲಗನ್ನು ತೋರಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಹೊಸ ಭೂಸ್ವಾಧೀನತೆ ಅಧಿನಿಯಮ, 2013ರ 24(2)ನೇ ಪ್ರಕರಣದ ಅಡಿಯಲ್ಲಿ ಒಳಗೊಂಡ ಉಪಬಂಧಗಳ ಬೆಳಕಿನಲ್ಲಿ ಅವುಗಳನ್ನು ರದ್ದುಗೊಂಡ ಸ್ವಾಧೀನತಾ ಕಾರ್ಯವಿಧಾನಗಳೆಂದು ಅರ್ಥೈಸುವ ನಿರ್ಣಯಕ್ಕೆ ಬರಲಾಗಿದೆ.

33. ಹಾಗಾಗಿ, ಈ ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ. ಪ್ರಶ್ನಿತ ಜಮೀನುಗಳ ಸಂಬಂಧದಲ್ಲಿ ಸ್ವಾಧೀನತೆ ವ್ಯವಹರಣೆಗಳನ್ನು ಪ್ರಾರಂಭಿಸುವುದು ಮತ್ತು ಮುಂದುವರೆಸುವುದು ರದ್ದುಗೊಂಡಿದೆ ಎಂಬ ಅಭಿಪ್ರಾಯವು ಈ ನ್ಯಾಯಾಲಯದಿಂದ ನಿರ್ಣಯವಾಗಿದೆ.

———